ಮಾಯಾಂದಾಲ್

ಯಶವಂತಿ ಎಸ್. ಸುವರ್ಣ



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಕ್ಕಳಿಗಾಗಿ ತುಳುಕತೆಗಳು

ಕನ್ನಡ : 'ಮಕ್ಕಳಿಗಾಗಿ ಕತೆಗಳು' ಮಾಲಿಕೆಯಲ್ಲಿ
ಮಾಯಾಂದಾಲ್ - ಯಶವಂತಿ ಎಸ್. ಸುವರ್ಣ ಅವರಿಂದ
ಅಂಚೆ ನಕ್ರೆ, ಕಾರ್ಕಳ ತಾಲೂಕು, ದ. ಕ. (08256-278253)
ಪ್ರಸರಣ - ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು.

ಮುದ್ರಣ	:	2007
ಬೆಲೆ	:	ರೂ.25
ಪುಟಗಳು	:	24
ಪ್ರಧಾನ ಸಂಪಾದಕ	:	ಯಮ್. ಕೆ. ಸೀತಾರಾಮ್ ಕುಲಾಲ್ ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಪ್ರಕಾಶಕರು	:	ಎಸ್. ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಹಾನಗರ ಪಾಲಿಕೆ ಕಟ್ಟಡ ಲಾಲ್‌ಬಾಗ್, ಮಂಗಳೂರು - 3. ದೂರವಾಣಿ / ಫ್ಯಾಕ್ಸ್ : 0824- 2459389 Email: tuluacademy@yahoo.co.in
ಹಕ್ಕುಗಳು	:	ಅಕಾಡೆಮಿ
ಮುದ್ರಣ	:	ಪವನ್ ಗ್ರಾಫಿಕ್ಸ್ ಅಳಕೆ, ಮಂಗಳೂರು - 575 003. Ph : 92428 85743

ಮಕ್ಕಳಿಗಾಗಿ ಕತೆಗಳು - ೫

ಮಕ್ಕಳಿಗಾಗಿ ಕತೆ

ಮಾಯಂದಾಲ್

ಯಶವಂತಿ ಎಸ್. ಸುವರ್ಣ

ಕರ್ನಾಟಕ ತುಳು ಸಾಹಿತ್ಯ ಅಕಾಡಮಿ
ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575003.
ದೂರವಾಣಿ / ಫ್ಯಾಕ್ಸ್ : 0824- 2459389
Email: tuluacademy@yahoo.co.in

ಅಧ್ಯಕ್ಷರ ಮೊದಲ ಮಾತು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಈ ಹಿಂದೆ ಅಚ್ಚು ಹಾಕಿಸಿದ, ಪ್ರಚಾರದಲ್ಲಿರುವ ಕೆಲವೊಂದು ಮಕ್ಕಳ ಕತೆಗಳನ್ನು ಈ ಬಾರಿ ಕನ್ನಡ ಭಾಷೆಗೆ ಅನುವಾದಿಸಿದೆ. ನಮ್ಮ ಹಿರಿಯರು ಮಕ್ಕಳಿಗೆ ಹೇಳುತ್ತಿದ್ದ, ವಾಡಿಕೆಯಲ್ಲಿ "ಅಜ್ಜಿ ಕತೆಗಳು" ಎಂದು ಕರೆಯಲ್ಪಡುವ ಸಣ್ಣ ಸಣ್ಣ ಕತೆಗಳು ಈಗ ತುಳು ಭಾಷೆಯಲ್ಲಿದ್ದ ಅದನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ತುಳು ಭಾಷೆಯು ಮೌಖಿಕ ಸಾಹಿತ್ಯದಲ್ಲಿ ಸಾಕಷ್ಟು ಪ್ರಚಾರಗೊಂಡಿದ್ದು, 1998ನೇ ಇಸವಿಯಲ್ಲಿ ತುಳು ಭಾಷೆಯಲ್ಲಿ ಅಕಾಡೆಮಿಯು ಅಚ್ಚುಗೊಳಿಸಿದ ಪುಸ್ತಕಗಳಲ್ಲಿ ಆರನ್ನು ಆಯ್ದು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ತುಳುವಿನ 'ಮಾಯಂದಾಳ್'ನ ಕತೆ ಕನ್ನಡದಲ್ಲಿ **"ಮಾಯಂದಾಲ್"** ಎಂಬ ಹೆಸರಿನಿಂದ ಅಚ್ಚಾಗಿ ಮಕ್ಕಳ ಕೈ ಸೇರುತ್ತಿದೆ.

ತುಳು ಭಾಷೆಯ ಮಕ್ಕಳ ಸಾಹಿತ್ಯ ಕನ್ನಡ ಭಾಷೆಯಲ್ಲೇ ವಿರಳವಾಗಿರುವಾಗ, ತುಳುವಿನಲ್ಲಿ ದೊರೆಯುವುದು ಅಸಾಧ್ಯ. ಈ ಕಾರಣದಿಂದ ಆಯ್ದ ಆರು ಪುಸ್ತಕಗಳು ಮಕ್ಕಳ ಅನುಕೂಲಕ್ಕಾಗಿ ತುಳುವಿನ ಬಗ್ಗೆ ಅಭಿಮಾನ, ಗೌರವ ಮೂಡಿಸಲಿಕ್ಕಾಗಿ ಕನ್ನಡಕ್ಕೆ ಅನುವಾದಗೊಂಡು ಹೊರತರಲಾಗಿದೆ.

ಈ ಆರು ಕತೆಗಳು ಒಂದೊಂದು ರೀತಿಯ ಅಜ್ಜಿ ಕತೆಗಳಾದರೂ, ಮಕ್ಕಳಿಗೆ ನೀತಿಯ ಪಾಠದ ಅರಿವು ಮೂಡಿಸುತ್ತದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ದಿ. ಅ. ಬಾಲಕೃಷ್ಣ ಶೆಟ್ಟಿ ಪೊಳಲಿಯವರ ಅವಧಿಯಲ್ಲೇ ಲೇಖಕರಿಂದಲೇ ಭಾಷಾಂತರ (ಅನುವಾದ)ಗೊಂಡು ಹಸ್ತಪ್ರತಿಗಳಾಗಿ ಉಳಿದುಕೊಂಡ, ಈ ಕೃತಿಗಳು ಈ ಅವಧಿಯಲ್ಲಿ ಅಚ್ಚಾಗುತ್ತಿರುವುದು ನಿಜವಾಗಿಯೂ ಅಕಾಡೆಮಿಗೆ ಹೆಮ್ಮೆಯ ವಿಷಯವಾಗಿದೆ.

ಈ ಕೃತಿಯನ್ನು ತುಳುವಿನಲ್ಲಿ ಬರೆದು, ಈಗ ಮತ್ತೆ ಪುನಃ ಕನ್ನಡಕ್ಕೆ ಅನುವಾದಗೊಳಿಸಿದ ಶ್ರೀಮತಿ ಯಶವಂತಿ ಎಸ್. ಸುವರ್ಣ ಇವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು. ಈ ಪುಸ್ತಕವನ್ನು ಚೆಲುವಾದ ಮುಖ ಪುಟದೊಂದಿಗೆ ಅಚ್ಚು ಮಾಡಿದ ಪವನ್ ಗ್ರಾಫಿಕ್ಸ್ ಇವರಿಗೆ ಕೂಡ ಕೃತಜ್ಞತೆಗಳು.

ಮಂಗಳೂರು
18-7-2007

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು

ಮಾಯಂದಾಲ್

ನಾನಾಗ ಆರೇಳು ವರ್ಷದ ಹುಡುಗಿ. ಆಗೆಲ್ಲಾ ಹಳ್ಳಿಯ ಮನೆಗಳಲ್ಲಿ ಮನೆ ತುಂಬಾ ಮಕ್ಕಳು ಆಳು ಕಾಳು ಜನ ತುಂಬಿರುತ್ತಿದ್ದರು. ಒಂದು ಮನೆಯ ಮಕ್ಕಳು ಒಟ್ಟು ಸೇರಿದರೆ ಈಗಿನ ಒಂದು ಬಾಲವಾಡಿ ಶಾಲೆಯೇ ಆಗಿ ಬಿಡುತ್ತಿತ್ತು. ಆದರೆ ಈಗ ಈಗಿನಂತೆ ಮಕ್ಕಳಿಗೆ ಮೂರು ವರ್ಷ ತುಂಬುವಾಗಲೇ ಶಾಲೆಗೆ ಹಾಕುವ ಅಭ್ಯಾಸ ಇರುತ್ತಿರರಲಿಲ್ಲ. ಏಳೆಂಟು ವರ್ಷ ತುಂಬಿದಾಗಲೇ ಶಾಲೆಯ ಹಾಜರಾತಿಯಲ್ಲಿ ಸೇರಿಸುವ ಕ್ರಮ. ಅಲ್ಲಿಯ ತನಕ ಮನೆಯ ಮತ್ತು ನೆರೆಕರೆಯ ಮಕ್ಕಳೆಲ್ಲಾ ಒಟ್ಟು ಸೇರಿ ಆಡುವುದು. ಆಕಾಶದಲ್ಲಿ ಸ್ವಚ್ಛಂದವಾಗಿ ರೆಕ್ಕೆ ಬಿಚ್ಚಿ ಹಾರಾಡುವ ಹಕ್ಕಿಗಳಂತೆ ಎಲ್ಲೆಲ್ಲಿ ತಿರುಗಾಡುವುದು. ಗುಡ್ಡ ಕಾಡು ನದಿ, ತೊರೆ, ಕೆರೆ, ಬಯಲು ಸುತ್ತುವುದು. ಹೀಗೆ ಮುಂಜಾನೆಯಿಂದ ಸಂಜೆಯ ತನಕ ಮನಸ್ವೇಚ್ಛೆ ಆಡುವುದೇ ಆಡುವುದು.

ಇನ್ನು ಊರಿನ ಕೋಲ, ಜಾತ್ರೆ ಬಂದರೆ ಮಕ್ಕಳಿಗೆ ರೆಕ್ಕೆಗಳು ನಾಲ್ಕು ಹುಟ್ಟಿಕೊಳ್ಳುತ್ತವೆ. ಆಗ ರಾತ್ರಿ ಮುಗಿದರೆ ನಿದ್ದೆ ಬಾರದು. ರಾತ್ರಿ ಇಡೀ ತಲೆಯೊಳಗೆ ಗುಂಯಿಗುಡುವುದು ಕೋಲದ ವಾದ್ಯ ಬ್ಯಾಂಡಿನ ಗೌಜಿ ಗದ್ದಲ. ಜೊತೆಗೆ ಅಜ್ಜ ಕೋಲದ ಕರ್ಚಿಗೆ ನೀಡುವ ಹಣದ ಲೆಕ್ಕಾಚಾರ. ಉರುಟಿನ ಬಿಳಿಯ ಒಂದು ಪಾವಲಿ. ಇದನ್ನು ಕೋಲದ ಬಾಕಿಮಾರು ಗದ್ದೆಯಲ್ಲಿ ಹೇಗೆ ಖರ್ಚು ಮಾಡುವುದು? ಏನೇನೆಲ್ಲಾ ತೆಗೆದು ಕೊಳ್ಳುವುದು.

ಸಕ್ಕರೆ ಮಿಠಾಯಿ, ಖಾರದ ಕಡ್ಡಿ, ಪುಗ್ಗ, ಪೀಂಪಿರಿ ಇತ್ಯಾದಿಗಳನ್ನೆಲ್ಲಾ ತೆಗೆದುಕೊಳ್ಳದಿದ್ದರೆ ಕೋಲ ಗಮ್ಮತ್ತು ಅಂತ ಎಣಿಸಿಕೊಳ್ಳಲಾರದು. ದೊಡ್ಡ ದೊಡ್ಡ ಮಕ್ಕಳೆಲ್ಲಾ ಒಟ್ಟು ಸೇರಿ ಕಾಲಿ ಮಂಡಲದ ಆಟ ಆಡಿ ಹಣ ಕಳಕೊಳ್ಳುವುದೂ ಉಂಟು. ಆಗೆಲ್ಲಾ ನಮ್ಮ ಸಣ್ಣ ಮಕ್ಕಳ ಕೈಯಲ್ಲಿನ ಹಣಕ್ಕೂ ಸಂಚಕಾರ ಬರುವುದುಂಟು. ಅದೆಲ್ಲಾ ಮಕ್ಕಳೊಳಗಿನ ಗುಟ್ಟಿನ ವಿಚಾರ. ಮನೆಯಲ್ಲಿ ಹೇಳುವಂತಿಲ್ಲ. ಒಂದು ವೇಳೆ ಗೊತ್ತಾದರೆ ಮಕ್ಕಳ ಬೆನ್ನಿನ ಚರ್ಮ ಸುಲಿದುಬಿಟ್ಟಾರು. ಆದ್ದರಿಂದ ಮನೆಗೆ ಬಂದು ಆ ಕುರಿತು ಯಾರೂ ಉಸಿರೆತ್ತುವುದಿಲ್ಲ. ಮಕ್ಕಳೊಡನೆ ಅಷ್ಟು ಒಗ್ಗಟ್ಟಿತ್ತು ಆಗ.

ತುಳು ಮಾಯಿ ತಿಂಗಳ ಹುಣ್ಣಿಮೆ ಬಂದಾಗ ಊರ ಗರಡಿಯಲ್ಲಿ ಬೆರ್ಮೆರ್ ಬೈದರ್ಕಳ ಕೋಲ. ಹಗಲು ಹೊತ್ತು ಮಾಯಂದಾಳ್ ಅನ್ನುವ ಹೆಣ್ಣು ಭೂತದ ಕೋಲ. ಕೋಲದ ಮುಂಚಿನ ದಿವಸ ಗರಡಿಯಲ್ಲಿ ಅಗೆಲು ತಂಬಿಲದ ಕ್ರಮ. ಕುಡಿ ಬಾಳೆಎಲೆಯಲ್ಲಿ ಬಿಡಿಸಿದ ಪ್ರಸಾದ ರೂಪದ ಅನ್ನ ಪದಾರ್ಥ ಆಯಾಯ ಗುತ್ತು ಬರ್ಕೆಗಳಿಗೆ ತಲುಪುವಾಗ ಮುಂಜಾನೆಯ ಕೋಳಿ ಕೂಗುತ್ತಿತ್ತು. ಅಮ್ಮ ಮಲಗಿದ ಮಕ್ಕಳನ್ನು ಎಬ್ಬಿಸಿ ಬಾಳೆ ಎಲೆಯ ತುಂಡಿನಲ್ಲಿ ಅದನ್ನು ಹಂಚಿಕೊಳ್ಳುವುದೇ ಒಂದು ಚೆಂದ.

ದೊಡ್ಡ ದೊಡ್ಡ ತುಂಡಿನ ಬಾಳೆಕಾಯಿ ಮತ್ತು ಚೀನಿ ಕುಂಬಳಕಾಯಿ ಪದಾರ್ಥ. ಕುಚ್ಚಿಗೆ ಅಕ್ಕಿಯ ಕಾರ್ತಿ ಬೆಳೆಯ ಅನ್ನ. ಇದನ್ನೆಲ್ಲಾ ಒಟ್ಟಿಗೆ ಬೆರಸಿ ಈಗಿನ ಪಲಾವ್‌ನಂತಿರುವ, ಒಳ್ಳೆ ಮೆಣಸಿನ (ಕರಿ ಮೆಣಸು)ಘಮ ಘಮ ಪರಿಮಳ ಕುಟ್ಟುವ ಪ್ರಸಾದ. ಅಮ್ಮ ಬಾಳೆ ಎಲೆ ತುಂಡಿನಲ್ಲಿ ಪ್ರಸಾದದಂತೆ ನೀಡುವ ಆ ಅನ್ನವನ್ನು ಮಕ್ಕಳು ಕಣ್ಣು ತೂಕಡಿಸುತ್ತಾ ತಿನ್ನುವುದೇ ಒಂದು ದೊಡ್ಡ ಖುಷಿ.

ಮರುದಿನ ಸಂಜೆ ಗರಡಿಯಿಂದ ಕದನಿ, ಗರ್ನಾನಾ ಕೇಳುವುದೇ ತಡ ಮತ್ತೆ ಮಕ್ಕಳ ಕಾಲುಗಳು ನೆಲದ ಮೇಲೆ ನಿಲ್ಲಲಾರದು. ಹೊಸ ಅಂಗಿ ಧರಿಸಿ ಧಿಮ್ಮಿಗುಟ್ಟಿಕೊಂಡು ಕೋಲಕ್ಕೆ ಯಾವಾಗ ಹೋಗುವುದೋ ಎಂಬ ತವಕ. ಆಗ ಇದರಲ್ಲಿ ಆನೆ ಅಡ್ಡ ಬಂದರೂ ಗೋಚರ ಆಗದು. ಬೇಗನೆ ಹೋಗಿ ಅಂಗಣದ ಮುಂಭಾಗದಲ್ಲಿ ಜಾಗ ಹುಡುಕಿ ಕೂತುಕೊಳ್ಳುವ ಅವಸರ.

ಕೋಟಿ ಚೆನ್ನಯರ ಅಬ್ಬರದ ಮೊದಲ ಕುಣಿತ ಮುಗಿಯುತ್ತದೆ. ಬಳಿಕ ತೆಂಬರೆಯೊಟ್ಟಿಗೆ

ಉದ್ದಕ್ಕೆ ರಾಗ ಎಳೆದು ಪಾಡ್ದನ ಹೇಳುವಾಗ ಮಕ್ಕಳಿಗೆ ಬರೇ ಬೋರು. ಜನಕ ರಾಜನ ಆ ಸ್ಥಾನದಲ್ಲಿ ರಾಮನ ಬಂಟರು ಮಾಡಿದಂತೆ ಒಬ್ಬರಿಗೊಬ್ಬರು ಪುಂಡಾಟ ಮಾಡಿಕೊಳ್ಳಲು ಶುರು. ಇದನ್ನು ಇದಿರ ಸಾಲಿನಲ್ಲಿ ಕುಳಿತ ಅಜ್ಜ, ಅಲ್ಲಿಂದಲೇ ಕಣ್ಣು ಕೆಂಪಗೆ ಮಾಡಿ ಮಕ್ಕಳ ಗುಂಪಿನತ್ತ ನೋಡಿದಾಗ ಮಕ್ಕಳ ಸೊಲ್ಲು ಅಲ್ಲೇ ಅಡಗಿ ಬಿಡುತ್ತದೆ.

ಅಜ್ಜನ ಮುಖ ಅರಳಿ ನಿಂತ ಆ ದೊಡ್ಡ ಗಲ್ಲು ಮೀಸೆ, ದೊಡ್ಡ ಮುಂಡಾಸು, ಗಂಭೀರ ಮುಖ, ಎತ್ತರದ ದೇಹ ನೋಡಿದರೆ ಮಕ್ಕಳು ಬಿಡಿ ಇಡೀ ಊರಿನ ಜನರೇ ತಲೆ ಬಾಗುತ್ತಿದ್ದರು. ಕೋಲದ ಬಾಕಿಮಾರು ಗದ್ದೆಯಲ್ಲಿನ ಸಂತೆಯಲ್ಲಿ ಒಂದು ಸುತ್ತು ತಿರುಗಾಡಿ ಬಂದಾಗ, ಕೈಯಲ್ಲಿದ್ದ ಅಜ್ಜ ಕೊಟ್ಟ ಹಣ ಖಾಲಿಯಾಗಿ ಬಿಡುತ್ತದೆ. ಅಲ್ಲದೆ, ಕೋಟಿ ಚೆನ್ನಯರ ಎರಡನೆಯ ಸುತ್ತಿನ ಕುಣಿತ ಮುಗಿದಾಗ ಮಕ್ಕಳ ಕಣ್ಣಿನಲ್ಲಿ ಗೆಣಸು ತೂಗಲು ಆರಂಭವಾಗುತ್ತದೆ. ಆಗ ಕುಳಿತಲ್ಲೇ ಭೂಮಿಗೊರಗಿ ಮುರುಟಿ ಮಲಗಿದರೆ ಸುಖದ ನಿದ್ದೆ. ಬಳಿಕ ಎಚ್ಚರಾಗುವಾಗ ಮೂಡುಗಡೆ ಬಾನಲ್ಲಿ ಸೂರ್ಯ ಮುಗುಳು ನಗುತ್ತಾ ಮೇಲೇರುತ್ತಾ ಬರುತ್ತಾನೆ. ಆಗ ತಡಬಡನೆ ಮೇಲೆದ್ದು ಅಂಗಿಗಳಿಗೆ

ಹಿಡಿದ ದೂಳನ್ನು ಕೊಡವಿಕೊಂಡು ತಮ್ಮ ತಮ್ಮ ಮನೆಗಳಿಗೆ ಓಡುವ ಮಕ್ಕಳ ರಭಸವೆಂದರೆ ಆಣೆಕಟ್ಟಿನ ತೂಬು ಬಿಚ್ಚಿದಂತೆ.

ಬೈದರ್ಕಳ ಕೋಲ ಮುಗಿದಂತೆ, ಮತ್ತೆ ಅದೇ ಅಂಕಣದಲ್ಲಿ ಮರುದಿನ ಮಾಯಂದಾಳ್ ಎನ್ನುವ ಹೆಣ್ಣು ಭೂತದ ಕೋಲ. ಈ ಕೋಲದಲ್ಲಿ ಹೆಂಗಸರ ಸಭೆಯೇ ದೊಡ್ಡದು. ಊರ ಪರವೂರ ಹೆಂಗಳೆಯರೆಲ್ಲಾ ಒಟ್ಟಾಗಿ ಕೈಯಲ್ಲಿ ಹೂ, ಹಿಂಗಾರದ ತಟ್ಟೆಯನ್ನು ಹಿಡಿದುಕೊಂಡು ದಿಬ್ಬಣದಂತೆ ಬರುವ ಅವರನ್ನು ನೋಡುವುದೇ ಒಂದು ಚೆಂದ.

ಇನ್ನು ಮಾಯಂದಾಳ್‌ಗೆ ಹರಕೆ ಹೊರುವ ಕತೆ ಕೇಳಿದರೆ ತಲೆ ತಿರುಗೀತು. ಪಟ್ಟೆ ಸೀರೆ, ತೊಟ್ಟಿಲು ಮಗು, ನಗನಾಣ್ಯ, ಹೂ ಹಿಂಗಾರ ಹೀಗೆ ಒಂದೇ ಎರಡೇ ಇನ್ನು ಮಾಯಂದಾಳದ ವೇಷ ಭೂಷಣವೋ ಥೇಟ್ ಮದುಮಗಳ ಹಾಗೇ. ತಲೆ ತುಂಬಾ ಹೂ, ಹಿಂಗಾರ, ಬೈತಲೆಯಾಭರಣ, ಜಡೆಗೊಂಡೆ, ತೋಳಬಂಧಿ, ಗೆಜ್ಜೆದಿಕ್ಕು, ಮುಂಗೈಸರಪಳಿ, ಕಾಲಿಗೆ ಉರಿಗೆಜ್ಜೆ, ನಡುವಿಗೆ ಸೊಂಟಪಟ್ಟಿ, ಕೆಂಪು ಪಟ್ಟೆಸೀರೆ ಉಟ್ಟುಕೊಂಡು, ಕಣ್ಣಿಗೆ ಕುಡಿ ಕಾಡಿಗೆ, ತುಟಿಗೆ ಕವಳದ ಕೆಂಪು, ಕೈಯಲ್ಲಿ ಗೆಜ್ಜೆದಿಕ್ಕು ಅನ್ನುವ ಸಣ್ಣ ಚಾಕುವಿನಂತಹ ಕತ್ತಿಯನ್ನು ಅಡಿಕೆ ವೀಳ್ಯದ ಜೊತೆಗೆ ಹಿಡಿದುಕೊಂಡು, ಗಣದಲ್ಲಿ ಚಕ...ಚಕ... ಕುಣಿಯುತ್ತಾ ಬಂದಾಗ ಆ ಚೆಲುವನ್ನು ನೋಡಲು ನೂರು ಕಣ್ಣುಗಳಿದ್ದರೆ ಸಾಲದು. ಕಣ್ಣಿಗಳಿಗೊಂದು ಹಬ್ಬವೇ ಹಬ್ಬ.

ಮಾಯಂದಾಳ್‌ನ್ನು ಸಂತಾನ ಭಾಗ್ಯ ನೀಡುವ ದೇವತೆ ಎಂತಲೂ ನಂಬುತ್ತಾರೆ. ನಂಬಿದವರ ಮನಸ್ಸ್ವೇಚ್ಛೆಯನ್ನು ಈಡೇರಿಸುವವ ಮಹಾನ್ ಶಕ್ತಿ ಆಕೆ ಎಂತಲೂ ಜನರು ಆಕೆಯ ಮೇಲೆ ನಂಬಿಕೆ ವಿಶ್ವಾಸವಿಟ್ಟಿದ್ದಾರೆ. ಅಂತೆಯೇ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಊರ ಬೈದರ್ಕಳ ಗರಡಿಗೂ ಆಕೆಗೂ ಯಾವ ಸಂಬಂಧವಪ್ಪಾ? ಕೆಲವೆಡೆ ಗರಡಿ ಇದ್ದಲ್ಲಿ ಆಕೆಗೂ ಒಂದು ಗುಡಿ ಇದೆ. ಅಂತೆಯೇ ಸೇವೆಯೂ ಸಲ್ಲುತ್ತದೆ. ಇದರ ಕತೆ ಏನು? ಹೇಗೆ? ಎನ್ನುವ ವಿಚಾರ ತಲೆಯೊಳಗೆ ತಿರುಗಲು ಪ್ರಾರಂಭವಾಯ್ತು.

ಅಂದು ರಾತ್ರೆ ಅಜ್ಜನ ಸುತ್ತ ಸೇರಿ ಕಾಲೊತ್ತುತ್ತಿದ್ದ ಮಕ್ಕಳು, "ಇವತ್ತೂ ತುಳುನಾಡಿನ ಸಾಹಸಿಗಳಾದ "ಕನ್ನಂಗಾರ್ ಬೊಗ್ಗಾ" ಮತ್ತು "ಅಗೊಳಿ ಮಂಜಣ್ಣ"ನ ಕತೆ ಬೇಡಜ್ಜ. ನಮಗಿವತ್ತು ಮಾಯಂದಾಳ್‌ನ ಕತೆ ಹೇಳಿ" ಎಂತ ಒತ್ತಾಯ ಮಾಡಿದರು.

ಆಗ ಅಜ್ಜ, "ಇದನ್ನು ಕೋಲ ಕಟ್ಟುವ ತಬುರಜ್ಜನ ಬಾಯಿಂದ ಕೇಳಿದರೇನೇ ಚೆಂದ ಮಕ್ಕಳೇ ಈಗ ಹೋಗಿ ನಾವು ಮಲಗಿ ನಾಳೆ ತಬುರಜ್ಜನನ್ನು ಕರೆಸಿ ನಿಮಗೆ ಕತೆ ಹೇಳುತ್ತೇನೆ" ಎಂದು ಅಜ್ಜ ಸಮಾಧಾನ ಹೇಳಿದಾಗ ಮಕ್ಕಳು ಹೋಗಿ ಮಲಗಿದರು.

ಮರುದಿನ ತಬುರಜ್ಜ ಮನೆಗೆ ಬಂದ. ತಲೆಯ ಮೇಲೊಂದು ಬಟ್ಟೆಯ ಗಂಟು. ಬಗಲಲ್ಲಿ ನೇತಾಡುವ ತೆಂಬರೆ ಬಾಯಿ ತುಂಬಾ ಎಲೆ ಅಡಿಕೆ ಮೆಲ್ಲುತ್ತಾ ಆತ ಮನೆಯ ಮುಂದೆ ಬಂದು ನಿಂತ. ಅಜ್ಜನಿಗೆ ಬಗ್ಗಿ ನಮಸ್ಕರಿಸಿ ಬಳಿಕ ಮಕ್ಕಳನ್ನೆಲ್ಲಾ ಹತ್ತಿರ ಕರೆದು ಕೂರಿಸಿದ.

ನನಗಾಗ ಅಜ್ಜ ಹೇಳಿದ ಕತೆಯ ಕಿನ್ನರಜೋಗಿಯ ನೆನಪಾಯ್ತು. ಜೋಳಿಗೆಯ ಜೋಗಿ ಕಿನ್ನಾರಿ ಬಾರಿಸುತ್ತಾನೆ. ಆಗ ಬಿಲದೊಳಗೆ ಅಡಗಿ ಕೂತ ಇಲಿಗಳೆಲ್ಲಾ ಹೊರ ಬಂದು ಜೋಗಿಯ ಹಿಂದೆ ದಿಬ್ಬಣ ಹೋಗುತ್ತವೆ. ಅಂತೆಯೇ ತಬುರಜ್ಜನ ತೆಂಬರೆಯ ಸ್ವರ ಕೇಳಿ ಊರ ಮಕ್ಕಳೆಲ್ಲಾ ಒಟ್ಟು ಸೇರಿದರು. ತಬುರಜ್ಜ ಮನೆಯ ಮುಂದಿನ ಹಲಸಿನ ಮರದ ಕಟ್ಟೆಯ ಮೇಲೆ ಕುಳಿತ. ಮಕ್ಕಳಿಗೆ ಕತೆ ಹೇಳಲು ಶುರು ಮಾಡಿದ.

ಹಿಂದೆ ನಮ್ಮ ಈ ತುಳು ನಾಡಿನಲ್ಲಿ ಅನೇಕ ಮಂದಿ ವೀರಾದಿವೀರರಿದ್ದರು. ಅವರು ಜನರಿಗಾಗಿ ಬಾರೀ ಒಳ್ಳೆಯ ಕೆಲಸ ಮಾಡಿದವರು, ಅಂತೆಯೇ ಅಂದಿನ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ಹೋರಾಡಿದವರು. ಸತ್ಯ, ಧರ್ಮ ನ್ಯಾಯಗಳನ್ನು ಸಮಾಜದಲ್ಲಿ ಎತ್ತಿ ಹಿಡಿದವರು. ಅಂತಹ ಮಹಾತ್ಮರ ಸತ್ಯಕತೆಗಳು ಈ ತುಳುನಾಡಿನ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತಹುದು. ಅಲ್ಲದೆ ಅವರು ಮೂಡಿಸಿಕೊಂಡು ಹೋದ ಹೆಜ್ಜೆಗಳ ಗುರುತುಗಳು ತುಳುನಾಡಿನ ಜನರಿಗೊಂದು ದಾರೀದೀಪ. ಈ ದೀಪಗಳ ಸಾಲಿನಲ್ಲಿ ನಂದದ ಬೆಳಕಾಗಿ ಕೀರ್ತಿ ಶೇಷಳಾಗಿ ಬಾಳಿದ, ಸತ್ಯದ ಹೆಣ್ಣು ವೀರ ವನಿತೆ ಮಾಯಂದಾಲ್ ಒಬ್ಬಳು.

ಮೂಡುಗಡೆ ನಾಡಿನಲ್ಲಿ ಗುಡ್ಡೆ ಮೂಡಂದಾಲ ಪಟ್ಟ್ ಎಂಬಲ್ಲಿ ನಾಗಬೈದ್ಯರು ಎಂಬ ಒಬ್ಬ ಶ್ರೀಮಂತ ಇದ್ದರು. ನಾಗಬೈದರು ಊರಲ್ಲಿ ಎಲ್ಲರಿಗೂ ಬೇಕಾದವರಾಗಿದ್ದರು. ಅವರಿಗೆ ಬೇಕಾದಷ್ಟು ಐಶ್ವರ್ಯ ಭಾಗ್ಯವಿತ್ತು. ಮನೆ ತುಂಬಾ ಆಳು ಕಾಳು ಮತ್ತೂ ಗುತ್ತು ಬರ್ಕೆಯ ದೊಡ್ಡ ಮನೆ ಇತ್ತು.

ಅವರಿಗೊಬ್ಬಳು ಸುಂದರವಾದ ಮಮತೆಯ ಸೊಸೆ ಇದ್ದಳು. ಆ ತುಂಬಿದ ಮನೆಗೆ ಕೆರೆಯ ಮಧ್ಯೆ ಅರಳಿ ನಿಂತ ಕೆಂದಾವರೆಯಂತೆ ಶೋಭೆ ನೀಡುತ್ತಿದ್ದಳು. ನಾಗಬೈದ್ಯರು ಆಕೆಯನ್ನು ಪ್ರೀತಿಯಿಂದ "ಮಾಣಿ ಬಾಲೆ" ಎಂತ ಹೆಸರಿಟ್ಟು ಕರೆಯುತ್ತಿದ್ದರು. ಮಾಣಿಬಾಲೆ ಶುಕ್ಲಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಬರುತ್ತಿದ್ದಳು. ಮಾವ ನಾಗಬೈದ್ಯರಿಗೆ ಆಕೆಗೆ ಮದುವೆ ಮಾಡುವ ಆಲೋಚನೆ ಹುಟ್ಟಿಕೊಳ್ಳುತ್ತದೆ. ಸೊಸೆಯ ಸೌಭಾಗ್ಯದ ಜೀವನ ನೋಡುವ ಮನಸ್ಸಾಗುತ್ತದೆ.

ಇತ್ತ ತುಳುನಾಡಿನ ಪೊಯ್ಯ ಮುಡಿಪಾಲ ಬರ್ಕೆ ಎಂಬಲ್ಲಿ ರಾಜಬೈದ್ಯರು ಎಂಬ ಹೆಸರಿನ ಶ್ರೀಮಂತರಿದ್ದರು. ಅವರ ಹತ್ತಿರವೂ ಕೂಡಾ ಬೇಕಾದಷ್ಟು ಆಸ್ತಿ ಭೂಮಿ, ಐಶ್ವರ್ಯ ಭಾಗ್ಯ ಇತ್ತು. ಉಗ್ರಾಣ ತುಂಬುವಷ್ಟು ಅಕ್ಕಿ, ದವಸಧಾನ್ಯಗಳು, ಕಳಸಿಗೆಯಲ್ಲಿ ಅಳೆಯುವಷ್ಟು ಚಿನ್ನ, ಬೆಳ್ಳಿ ಹೀಗೆ ಅವರ ಐಶ್ವರ್ಯಕ್ಕೆ ಇತಿಮಿತಿಯೇ ಇದ್ದಿರಲಿಲ್ಲ. ಆದರೆ ಆ ತುಂಬಿದ ಅರಮನೆಯಲ್ಲಿ ಒಂದು ದೀಪ ಹಚ್ಚುವ ಹೆಣ್ಣು ಮಗು ಇಲ್ಲದೇ ಹೋಯ್ತಲ್ಲಾ ಎನ್ನುವ ಚಿಂತೆ ರಾಜಬೈದ್ಯರಿಗೆ.

ಅವರಿಗೆ ಬಾಲನಾಥ ಎನ್ನುವ ಪ್ರೀತಿಯ ಮಗನಿದ್ದ. ಅವನಿಗೆ ಸುಂದರವಾದ ಹೆಣ್ಣು ನೋಡಿ ಮದುವೆ ಮಾಡಬೇಕು ಎನ್ನುವ ಆಸೆ ಹುಟ್ಟಿತ್ತದೆ. ಅದರಂತೆ ನೆರೆಕರೆಯವರನ್ನು ಬಂಧುಗಳನ್ನು ಅರಮನೆಗೆ ಕರೆಸಿಕೊಳ್ಳುತ್ತಾರೆ. ತನ್ನ ಸುಖ-ಕಷ್ಟಗಳನ್ನು ಅವರೊಡನೆ ಹೇಳಿಕೊಳ್ಳುತ್ತಾರೆ. ನನ್ನ ಮಗ ಬಾಲನಾಥ ಬೈದ್ಯನಿಗೆ ಮದುವೆ ಮಾಡಬೇಕು. ಅದಕ್ಕಾಗಿ ನೀವೀಗ ಹೋಗಿ ಅವನಿಗೆ ಬೇಕಾದ ಹೆಣ್ಣು ನೋಡಿ ಬರಬೇಕು. ಹೆಣ್ಣು ಒಳ್ಳೆಯ ಮನೆತನದ ಮತ್ತು ಸುಂದರವಾಗಿರಬೇಕು" ಎಂದು ಹೇಳಿದರು. ಹಾಗಾದರೆ ನಿಮ್ಮ ಮಗನಿಗಾಗುವ ಹೆಣ್ಣು ನಾವು ಹುಡುಕಿ ಕೊಂಡು ಬರುತ್ತೇವೆ. ನೀವು ದುಃಖಿಸಬೇಡಿ ರಾಜಬೈದ್ಯರೇ" ಎಂದು ಬೈದ್ಯರಿಗೆ ಸಾಂತ್ವನ ಹೇಳಿ ಆ ಎಂಟು ಮಂದಿ ಆಳುಗಳು ಹೆಣ್ಣು ನೋಡಲು ಹೊರಡುತ್ತಾರೆ.

ಊರಿಂದ ಊರಿಗೆ ಸುತ್ತಿಕೊಂಡು ಅವರು ಬಳಿಕ ಪೊಯ್ಯಮುಡಿಪಲ್ಲ ಬರ್ಕೆಯ ಗುಡ್ಡೆಮನೆಯ ನಾಗಬೈದ್ಯರಲ್ಲಿಗೆ ಬರುತ್ತಾರೆ. ಇವರನ್ನು ದೂರದಿಂದ ಕಂಡ ನಾಗಬೈದ್ಯರು, ಮುಖ ಕೈಕಾಲು ತೊಳೆಯಲು ಕೆಂದಾಳೆಯ ಅಡಿಯಲ್ಲಿದ್ದ ಕಲ್ಲ ಮರಿಗೆಗೆ ನೀರು ಹೊಯ್ಯಿ ಇಡ್‌ತ್ತಾರೆ. ಅದಕ್ಕೆ ಕಂಚಿನ ಚೊಂಬು ಹಾಕುತ್ತಾರೆ. ಬಂದ ನೆಂಟರ ಕಾಲಿನ ದೂಳು. ಮುಖದ ಬೆವರನ್ನು ತೊಳೆಯಲು ಹೇಳಿ, ತೆಂಕು ದಿಕ್ಕಿನ ಚಾವಡಿಯಲ್ಲಿ ಅವರಿಗೆ ಚಾಪೆ ಹಾಕಿಕೊಟ್ಟು ದಣಿವಾರಿಸಲು ಹೇಳುತ್ತಾರೆ.

ಮತ್ತು ತಾವು ಬಂದ ಊರಿನ ಸುದ್ದಿ. ಪಕ್ಕದೂರಿನ ಸುದ್ದಿಗಳನ್ನು ವಿಚಾರಿಸಿಕೊಂಡು, ಬಳಿಕ ತಾವು ಇಲ್ಲಿಗೆ ಬಂದ ವಿಚಾರ ನನಗೆ ತಿಳಿಸಬೇಕಂತೆ ಕೇಳಿ ಕೊಳ್ಳುತ್ತಾರೆ.

"ನಾವು ನಿಮ್ಮಲ್ಲಿ ದೂರಕ್ಕೆ ಕೊಡುವ ಎತ್ತುಗಳಿವೆಯೆ? ಹತ್ತಿರಕ್ಕೆ ನೀಡುವ ಹೆಣ್ಣಿದೆಯೇ ಎಂತ ಕೇಳಲು ಬಂದೆವು" ಎಂದು ಬಂದ ನೆಂಟರು ಉತ್ತರಕೊಟ್ಟರು.

"ಹಾಗಾದರೆ ದೂರಕ್ಕೆ ನೀಡುವ ಎತ್ತುಗಳನ್ನು ಬೇಷ, ಕಾರ್ತೆಲ್ ತಿಂಗಳಲ್ಲಿ ಕೊಟ್ಟಾಗಿದೆ. ಹತ್ತಿರಕ್ಕೆ ನೀಡುವ ಹೆಣ್ಣನ್ನು ಸುಗ್ಗಿಪಗ್ಗು ತಿಂಗಳಲ್ಲಿ ಕೊಟ್ಟಾಗಿದೆ. ಇನ್ನು ಒಂದು ಹುಡುಗಿ ಇದೆ ನಮ್ಮಲ್ಲಿ. ಬರೀ ಎಳೆಯ ಪ್ರಾಯದ ಹೆಣ್ಣು. ದಿನವಿಡೀ ಮಕ್ಕಳ ಜೊತೆಗೆ ಹೊಯ್ಗೆ ಅನ್ನ, ಕಲ್ಲಿನ ಪಲ್ಯ ಮಾಡಿಕೊಂಡು ಆಡುತ್ತಾ ಕುಳಿತುಕೊಳ್ಳುವವಳು".

"ಹಾಗಾದರೆ ನಮ್ಮ ಹುಡುಗನಿಗೂ ಪ್ರಾಯವಿಲ್ಲ. ಮುಖದಲ್ಲಿ ಮುಗುಳು ನಗುವಿನ ಜೊತೆಗೆ ಈಗ ತಾನೇ ಕುಡಿ ಮೀಸೆ ಚಿಗುರುತ್ತಿದೆಯಷ್ಟೆ."

"ಮತ್ತೆ ಇನ್ನು ತಡವೇಕೆ? ಹೆಣ್ಣನ್ನು ನೀವು ನೋಡಿ. ಒಪ್ಪಿಗೆಯಾದರೆ ಬಾಲೆಯನ್ನು ಕರೆದು, ಅವಳ ಕೈಯಿಂದ ಒಂದು ಚೊಂಬು ನೀರು ನೆಂಟರಿಗೆ ನೀಡುವಂತೆ ಹೇಳಿ ಹೆಣ್ಣು ನೋಡುವ ಶಾಸ್ತ್ರ ಮಾಡಿಸಿದರು.

ಹೆಣ್ಣನ್ನು ನೋಡಿ ಬಂದ ನೆಂಟರಿಗೆ ಬಾರೀ ಖುಷಿಯಾಯ್ತು. ನಮ್ಮ ಹುಡುಗನಿಗೆ ನಿಮ್ಮ ಹುಡುಗಿ ಆಗಬಹುದು ಎಂತ ಒಪ್ಪಿಗೆ ಸೂಚಿಸಿದರು. ಆ ಮೇಲೆ ಒಟ್ಟಿಗೆ ಹೋಗಿ ಹುಡುಗಿಯ ಮತ್ತು ಹುಡುಗನ ಜಾತಕವನ್ನು ಪುರೋಹಿತರ ಹತ್ತಿರ ತೋರಿಸಿದರು. ಜಾತಕ ಕೂಡಿ ಬಂತು. ಜೊತೆಗೆ ಧಾರೆಯ ಮುಹೂರ್ತವನ್ನು ಇಟ್ಟರು.

ಪೊಯ್ಯೆ ಮುಡಿಪಲ್ಲ ಬರ್ಕೆಯಿಂದ ಗುಡ್ಡೆ ಮನೆಗೆ ದಿಬ್ಬಣ ಹಿಡಿದುಕೊಂಡು ಬರಬೇಕಂತ ನಾಗಬೈದ್ಯರು ಬಂದ ನೆಂಟರ ಕೈಯಲ್ಲಿ ವೀಳ್ಯ ಕೊಟ್ಟು ಬಳಿಕ ಅವರನ್ನು ಕಳುಹಿಸಿಕೊಟ್ಟರು. ತನ್ನ ಮಗನಿಗೆ ಹೆಣ್ಣು ನೋಡಲು ಹೋದವರು ಮದುವೆಗೆ ವೀಳ್ಯ ಪಡೆದುಕೊಂಡೇ ಹಿಂತಿರುಗಿದುದನ್ನು ನೋಡಿ ರಾಜಬೈದ್ಯರಿಗೆ ತುಂಬಾ ಸಂತೋಷವಾಯ್ತು. ಬಳಿಕ ಭಾರೀ ಸಂಭ್ರಮದಿಂದ ಮದುವೆಯ ಅಟ್ಟಣಿಗೆ ತೊಡಗುತ್ತಾರೆ.

ಮಾರನೆ ಮದುವೆಯ ದಿನ ಸೂರ್ಯೋದಯವಾಗುತ್ತಿದ್ದಂತೆ ಪ್ರೊಂಯ್ಕ ಮುಡಿಪಲ್ಲ ಬರ್ಕೆಯಿಂದ ಅದ್ದೂರಿಯ ವರನ ದಿಬ್ಬಣ ಹೊರಡುತ್ತದೆ. ಕೊಂಬು, ವಾದ್ಯ ಬಿರುಸು ಬಾಣಗಳ ಭಾರೀ ಗೌಜಿಯಿಂದ ವರನ ದಿಬ್ಬಣ ಬಂದು, ಗುಡ್ಡೆ ಮನೆಯ ಮುಂದಿನ ಬಾಕಿಮಾರು ಗದ್ದೆಯಲ್ಲಿ ಬಂದು ನಿಲ್ಲುತ್ತದೆ. ಊರಿನ ಗುರಿಕಾರರು ಮತ್ತು ಕಲಶ ಕನ್ನಡಿ ಹಿಡಿದ ಹವಿಹರೆಯರ ಸಿಂಗಾರಗೊಂಡ ಹೆಣ್ಣು ಮಕ್ಕಳು ಸೇಸ (ಅಕ್ಷತೆ ಕಾಳು) ಹಾಕಿ ದಿಬ್ಬಣವನ್ನು ಸ್ವಾಗತಿಸಿ ಮದುವೆ ಮನೆಗೆ ಕರೆದೊಯ್ದರು.

ಮದುವೆಯ ಮನೆಯಲ್ಲಿ ಆ ಊರ ಈ ಊರ ಗುರಿಕಾರರೆಲ್ಲಾ ಸೇರಿದ್ದರು. ಮದುಮಗ ಮದುಮಗಳನ್ನು ಧಾರೆಗೆ ಕೂರಿಸಲು ನಾಗಬೈದ್ಯರು ಅವರೊಡನೆ ಕೈಮುಗಿದು ಕೇಳಿಕೊಂಡರು. ಪಟ್ಟೆ ಸೀರೆ, ಸೊಂಟಕ್ಕೆ ನಡುಪಟ್ಟಿ ವೈತಲೆಗೆ ನೆತ್ತಿ ಬೊಕ್ತಲೆ, ಜಡೆಗೊಂಡೆ, ಹೂ, ಹಿಂಗಾರ ಮುಡಿಸಿ, ಕೈಗೆ ತೋಳು ಬಂದಿ ಮುಂಗೈಗೆ ಮುಂಗೈ ಸರಪಳಿ, ಕಾಲಿಗೆ ಉರಿಗೆಜ್ಜೆ,ಹೀಗೆ ತಲೆಯಿಂದ ಕಾಲಿನ ತನಕ ಸಿಂಗಾರ ಮಾಡಿ, ಮದುಮಗಳು ಮಾಣಿಬಾಲೆಯನ್ನು ಧಾರೆಯ ಚಪ್ಪರಕ್ಕೆ ಮುತ್ತೈದೆ ಹೆಂಗಸರು ಕರೆ ತಂದರು.

ಜರಿಯ ಪೇಟಾ, ಒಲ್ಲಿಯ ಕಚ್ಚೆ, ನಡುಪಟ್ಟಿ, ಬಿಳಿಯ ಕೊಡೆಯಡಿಯಲ್ಲಿ ಕೆಂಪುಹಾಸಿನ ಮೇಲೆ ಹೆಜ್ಜೆಯ ಮೇಲೆ ಹೆಜ್ಜೆ ಹಾಕಿಕೊಂಡು ಬಂದು ಧಾರೆಯ ಮಣೆಯ ಮೇಲೆ ಕುಳಿತರು ಬಾಲನಾಥ ಬೈದ್ಯರು. ಕಂಚಿನ ಸಿರಿಗಿಂಡೆಯಿಂದ ಸೊಸೆ ಮಾಣಿಬಾಲೆಯನ್ನು, ಬಾಲನಾಥ ಬೈದ್ಯರಿಗೆ ಧಾರೆ ಎರೆದು ಕನ್ಯಾಧಾನ ಮಾಡಿ ಕೊಟ್ಟರು ನಾಗಬೈದ್ಯರು. ಧಾರೆಯ ಮಂಟಪದಲ್ಲಿ ಸೂರ್ಯಚಂದ್ರರಂತೆ ಕಾಣುತ್ತಿದ್ದ ಮದುಮಕ್ಕಳನ್ನು ನೆರೆದವರು ಕಣ್ಣು ತುಂಬಾ ನೋಡಿದರು ಆನಂದಿಸಿದರು. ಬಳಿಕ ಹೊಟ್ಟೆ ತುಂಬಾ ಹಾಲಿನೂಟ, ಪಾಯಸದೂಟ ಮತ್ತು ವಿವಿಧ ಭಕ್ಷಬೋಜ್ಜಗಳನ್ನು ತಿಂದು ಉಂಡು ಡರ್ರೆಂತ ತೇಗಿ ಖುಷಿ ಪಟ್ಟರು. "ಇಂತಹ ಗೌಜಿ ಗದ್ದಲದ ಮದುವೆ ಈ ತನಕ ನಮ್ಮೂರಲ್ಲಿ ಆಗಲಿಲ್ಲಪ್ಪಾ" ಎಂತ ಅಚ್ಚರಿಪಟ್ಟರು.

ತನ್ನ ಪ್ರೀತಿಯ ಸೊಸೆಯನ್ನು ಪತಿಗೃಹಕ್ಕೆ ಕಳುಹಿಸಿ ಕೊಡುವಾಗ ನಾಗಬೈದ್ಯರಿಗೆ ಭಾರೀ ದುಃಖವಾಗುತ್ತದೆ. "ಹುಟ್ಟಿದ ಮನೆ ಮತ್ತು ಹೊಕ್ಕ ಮನೆಯ ವಂಶದ ದೀಪವಾಗಿ ನೀನು ಬಾಳಬೇಕು

ಮಗೂ" ಎಂದು ಸೊಸೆಯ ನೆತ್ತಿಯ ಮೇಲೆ ಕೈಯಿಟ್ಟು ಆಶೀರ್ವದಿಸಿ ಹರಿಸಿದರು. ಆಗ ಮಾಣಿಬಾಲೆಯು ಮಾವನ ಕಾಲಿಗೆ ಅಡ್ಡ ಬಿದ್ದು ಬಿಕ್ಕಿ ಬಿಕ್ಕಿ ಅತ್ತಳು. ಈ ದೃಶ್ಯವನ್ನು ನೋಡಿ ನೆರೆದ ಜನರೆಲ್ಲರ ಕಣ್ಣುಗಳೂ ಹನಿಗೂಡಿದವು.

ದಿಬ್ಬಣದೊಂದಿಗೆ ಪೊಯ್ಯೆಮುಡಿಪಲ್ಲ ಬರ್ಕೆಗೆ ಬಂದ ಮಾಣಿಬಾಲೆಯನ್ನು "ಬಲಗಾಲನ್ನು ಒಳಗಿಟ್ಟು ಬಾ ಮಗಳೇ... ಮುತ್ತಿನಂತಹ ಸೊಸೆಯಾಗಿ ಈ ಮನೆಯ ಬೆಳಕಾಗಿ..." ಎಂದು ಪ್ರೀತಿಯಿಂದ ಸೊಸೆಯನ್ನು ಹರಸಿ ತಮ್ಮ ಮನೆ ತುಂಬಿಕೊಂಡರು ರಾಜಬೈದ್ಯರು.

ಮಾವ ಹೇಳಿದ ಮಾತನ್ನು ಭಯಭಕ್ತಿಯಿಂದ ಕೇಳುತ್ತಿದ್ದಳು ಮಾಣಿಬಾಲೆ. ಮನೆಮಂದಿಯನ್ನು ಪ್ರೀತಿಯಿಂದ ನೋಡುತ್ತಿದ್ದಳು. ಅಲ್ಲದೆ ತನ್ನ ಬಾಳಸಂಗಾತಿಗೆ ಮುದ್ದಿನ ಮಡದಿಯಾಗಿ, ಸುಖ-ಸಂತೋಷ ನೀಡುತ್ತಿದ್ದಳು. ಹೀಗೆ ಪತಿಯ ಮನೆಯ ಎಲ್ಲರ ಕಣ್ಮಣಿಯಾಗಿ ಬಾಳ್ವೆ ಮಾಡುತ್ತಿದ್ದಳು ಮಾಣಿಬಾಲೆ.

ಕಾಲಚಕ್ರ ಉರುಳುತ್ತಾ ಬಂತು. ಬಾಲನಾಥ ಬೈದ್ಯ ಮತ್ತು ಮಾಣಿಬಾಲೆಯರ ದಾಂಪತ್ಯ ಜೀವನಕ್ಕೆ ಆರು ವರ್ಷ ಸಂದಿತು. ಇನ್ನು ಅವರ ದಾಂಪತ್ಯ ಬಳ್ಳಿಯಲ್ಲಿ ಹೂ ಅರಳಲಿಲ್ಲ. ಸಂತಾನ ಭಾಗ್ಯವಿಲ್ಲದೆ ಆ ದಂಪತಿಗಳು ತಮ್ಮಷ್ಟಕ್ಕೆ ಕೊರಗತೊಡಗಿದರು. ಎಂತಹ ಐಶ್ವರ್ಯ ಭಾಗ್ಯ ಇದ್ದೇನು ಪ್ರಯೋಜನ? ಮನೆ ತುಂಬಾ ಆಡುವ ಕಿಲ ಕಿಲ ನಗುವ ಮಕ್ಕಳು ಇಲ್ಲದ ಮೇಲೆ? ಗೊನೆ ಹಾಕದ ಬಾಳೆ ಗಿಡ. ಹೂಕಾಯಿ ಬಿಡದ ಮರ ಇದ್ದೇನು ಪ್ರಯೋಜನ? ಬರೀ ವ್ಯರ್ಥ ಎನ್ನುವ ಚಿಂತೆ ಆ ದಂಪತಿಗಳನ್ನು ಕಾಡಿತು. ಮುಂಜಾನೆಯ ಸೂರ್ಯೋದಯದ ಹೊತ್ತಿನಲ್ಲಿ ಮುಗ್ಳುನ್ನಗುತ್ತಾ ಅರಳುವ ಕೊಳದಾವರೆಯಂತಿದ್ದ ಮಾಣಿಬಾಲೆಯ ಮುಖಬಾಡಿ ಬೆಂಡಾಗುತ್ತದೆ.

ಒಂದು ದಿನ ಆಕೆ ಮಡ್ಡೆಲ ಪರಪು ಕೆರೆಗೆ ಸ್ನಾನ ಮಾಡಲು ಹೋಗುತ್ತಾಳೆ. ಒಂದು ಮುಷ್ಠಿ ಬೆಳ್ತಿಗೆ ಅಕ್ಕಿಯನ್ನು ತನ್ನ ಸೆರಗಿನಲ್ಲಿ ಕಟ್ಟಿಕೊಂಡು ಹೋಗುತ್ತಾಳೆ. ಪಾವೂರ ಗಂಡು ಕಲ್ಲಿನ ಮೇಲೆ ಬಟ್ಟೆ ಒಗೆಯುತ್ತಾಳೆ. ಕೆಂಪುಗುಡ್ಡೆ, ಕೆಮ್ಮಡೆ ಕರ್ಯ, ಏಳು ನೆಲೆ ಬೆರ್ಮೆರರ ಗುಂಡಿಯಲ್ಲಿ ಸ್ನಾನಕ್ಕೆ ಇಳಿಯುತ್ತಾಳೆ. ನಡುನೀರಿನಲ್ಲಿ ನಿಂತು ಬ್ರಹ್ಮದೇವರನ್ನು ನೆನೆದು ಪ್ರಾರ್ಥಿಸುತ್ತಾಳೆ. "ಸ್ವಾಮೀ... ಬ್ರಹ್ಮದೇವರೇ ನಾನು ಸತ್ಯಧರ್ಮದ ದಾರಿಯಲ್ಲಿ ನಡೆದುಕೊಂಡು ಬಂದವಳು ನನ್ನ ಕೈಹಿಡಿದ ಗಂಡನ ಆಸೆಯನ್ನು ಈಡೇರಿಸಿಕೊಡಬೇಕು. ನಮ್ಮ ವಂಶದ ಕುಡಿ ಬೆಳೆಯುವಂತೆ ಅನುಗ್ರ ಮಾಡಬೇಕು. ನನಗೆ ಸಂತಾನ ಭಾಗ್ಯ ನೀಡಬೇಕು" ಎಂದು ಕೈಮುಗಿದು ಬ್ರಹ್ಮದೇವರೊಡನೆ ಪ್ರಾರ್ಥಿಸಿಕೊಳ್ಳುತ್ತಾಳೆ. ಆ ಮೇಲೆ ಸೆರಗಿನಲ್ಲಿ ಕಟ್ಟಿಕೊಂಡಿದದ್ದ ಬೆಳ್ತಿಗೆ ಅಕ್ಕಿಯನ್ನು ನೀರಿನಲ್ಲಿ ಈಜಾಡುತ್ತಿದ್ದ ಮೀನುಗಳಿಗೆ ಹಾಕುತ್ತಾಳೆ. ಮೀನುಗಳು ಆ ಅಕ್ಕಿಯನ್ನು ಖುಷಿಯಿಂದ ತಿನ್ನುತ್ತವೆ. ಅದನ್ನು ನೋಡಿ ಮಾಣಿಬಾಲೆಗೂ ತುಂಬಾ ಖುಷಿಯಾಗುತ್ತದೆ. ಏನೋ ಒಂದು ರೀತಿಯ ಮನಸ್ಸಿನೊಳಗೆ ಆನಂದ. ತನ್ನ ಚಿಂತೆ ದೂರವಾದಂತೆ ವಿಶೇಷ ತರದ ಅನುಭವವಾಗುತ್ತದೆ. ಆ ವಿಶೇಷ ಅನುಭವದ ಖುಷಿಯಲ್ಲೇ ಬೆರ್ಮೆರ ಗುಂಡಿಯಲ್ಲಿ ಮುಳುಗು ಹಾಕಿ ಮಿಂದು ಮನೆಯ ಕಡೆಗೆ ಹಿಂತಿರುಗುತ್ತಾಳೆ.

ತಿಂಗಳುಗಳು ಕಳೆಯುತ್ತವೆ. ರಾಜಬೈದ್ಯರ ಸೊಸೆ ಮಾಣಿಬಾಲೆ ಗರ್ಭಿಣಿ ಎನ್ನುವ ಸುದ್ದಿ ಊರೆಲ್ಲಾ ಹರಡುತ್ತದೆ. ರಾಜಬೈದ್ಯರು ಮಗನನ್ನು ಕರೆದು ಸೊಸೆಗೆ ಬಾರೀ ಗೌಜಿಯ ಸೀಮಂತ

ಮಾಡಬೇಕು ಎಂತ ಹೇಳುತ್ತಾರೆ. ಈ ಸಂತೋಷದ ಸುದ್ದಿ ತಿಳಿದು, ಬಾಲನಾಥ ಬೈದ್ಯರಿಗೆ ತುಂಬಾ ಸಂತೋಷವಾಗುತ್ತದೆ. ಅರಮನೆಯಲ್ಲಿ ಸೀಮಂತದ ಅಟ್ಟಣೆ ಶುರುವಾಗುತ್ತದೆ. ಬಾಲನಾಥ ಬೈದ್ಯರಿಗೆ ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಗಿದೆ. ತನ್ನ ಪ್ರೀತಿಯ ಮಡದಿಯ ಮುಖ ನೋಡಿದಷ್ಟೂ ಸಾಲದು ಎಂದೆಣಿಸುತ್ತದೆ.

ಚೊಚ್ಚಲ ಗರ್ಭಿಣಿಗೆ ಮುಡಿಯಲು ಮಂಗಳೂರು ಮಲ್ಲಿಗೆ ತರಿಸಿದರು. ಬಂಟ್ವಾಳ ಪೇಟೆಯಿಂದ ಸಾವಿರ ಬಗೆಯ ಭಕ್ಷ್ಯ ಬೋಜ್ಯಗಳನ್ನು ತಂದರು. ಸಿಂಗಾರಗೊಂಡ ಗರ್ಭಿಣಿಯನ್ನು ಬಣ್ಣದ ಪದೊಳಿಯ ಹಿರಿಯ ಚಾವಡಿಗೆ ಕರೆ ತಂದು ಕೂರಿಸಿದರು. ಉತ್ತರಕ್ಕೆ ಬಾಗಿದ ಬಾಳೆಯ ಕುಡಿ ಎಲೆಯನ್ನು ಎದುರಿಗೆ ಹಾಕಿದರು. ಭರಣಿಯ ಮಿಡಿ ಉಪ್ಪಿನಕಾಯಿ, ಎಳೆ ಕಣಿಲೆಯ ಪದಾರ್ಥ, ಸಾವಿರ ಬಗೆಯ ಸಿಹಿ ತಿಂಡಿ ಬಡಿಸಿದರು. ಎಲೆಯಲ್ಲಿ ಹರಿದು ಹೋಗುವಷ್ಟು ದನದ ಹಾಲು, ಮುಂಗೆ ಮುಳುಗುವಷ್ಟು ತುಪ್ಪ ಬಡಿಸಿದರು. ಅಂತೆಯೇ ಸಭೆಯಲ್ಲಿ ಸೇರಿದ ನೆಂಟರಿಷ್ಟರಿಗೂ ಬಡಿಸಿದರು. ಇಂತಹ ಗಮ್ಮತ್ತಿನ ಸೀಮಂತ ಇಷ್ಟರ ತನಕ ಈ ಊರಲ್ಲಿ ಆಗಲಿಲ್ಲಪ್ಪಾ... ಇದೊಂದು ನೆನಪಿಡತಕ್ಕಂತಹ ಸೀಮಂತ ಎಂತ ಜನರೆಲ್ಲಾ ಬಾಯಿ ತುಂಬಾ ಹೊಗಳಿದರು.

ಊಟದಿಂದ ಮೇಲೆದ್ದ ಮೇಲೆ ಮಾಣಿಬಾಲೆಯನ್ನು ದಂಡೆ ಮಂಚಿಲಿನಲ್ಲಿ ಕೂರಿಸಿದರು. ಬಿಸಿಲಿಗೆ ದಂಡಿಗೆಯ ಮೇಲಕ್ಕೆ ಪಟ್ಟೆ ಹಾಕಿಸಿದರು. ಗಾಳಿ ಚಾಮರದಲ್ಲಿ ಹಾಳು ಹಾಕುತ್ತಾ ಪೊಯ್ಯೆ ಬರ್ಕೆಯಿಂದ ಗುಡ್ಡೆಮನೆ ಬರ್ಕೆಗೆ ಕರೆತಂದರು.

ನವಮಾಸಗಳು ತುಂಬುತ್ತಲೇ ಮಾಣಿಬಾಲೆಗೆ ಪ್ರಸವ ವೇದನೆಗೆ ಆರಂಭವಾಯ್ತು. ಕೈಕಾಲು ನಡುಗತೊಡಗುತ್ತದೆ. ಮುಖ ನಿಸ್ತೇಜವಾಗುತ್ತದೆ. ನಾಗಬೈದ್ಯರು ಸೂಲಗಿತ್ತಿ ಬೊಮ್ಮೆ ಮದಿರೆಯನ್ನು ಕರೆಸುತ್ತಾರೆ. ಕುಲದೇವರ ಮುಂದೆ ನಿಂತು ತನ್ನ ಸೊಸೆಗೆ ಪ್ರಸವವಾಗಲೀ ಅಂತ ಪ್ರಾರ್ಥಿಸುತ್ತಾರೆ. ಬಳಿಕ ಗಿಡ ಮೂಲಿಕೆಯ ಎಣ್ಣೆ ತಯಾರಿಸಿ ಸೊಸೆಗೆ ಹಚ್ಚಲು ಸೂಲಗಿತ್ತಿಗೆ ನೀಡುತ್ತಾರೆ. ಸ್ವಲ್ಪ ಹೊತ್ತಿನ ನಂತರ ಮಾಣಿಬಾಲೆ ಸುಂದರವಾದ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆಗ ಸಂತೋಷದಿಂದ ಗಂಟೆ ಬಡಿದು ಮಗುವಿನ ಆಗಮನವನ್ನು ತಿಳಿಸುತ್ತಾರೆ. ಮತ್ತು ಮಗುವಿನ ಹೆದರಿಕೆಯನ್ನ ಕಳೆಯುತ್ತಾರೆ. ಬಳಿಕ ಮಗುವನ್ನು ಸ್ನಾನ ಮಾಡಿಸಿ ಬಾಣಂತಿಯ ಮಡಿಲಲ್ಲಿ ಮಲಗಿಸುತ್ತಾರೆ.

ಅದೇ ಮಾಗಣೆಯಲ್ಲಿ ಗುಡ್ಡೆ ಮೂಡಂದಾಲ ಭಟ್ಟಿ ಎನ್ನುವ ಒಂದು ಬೀಡು ಇದೆ. ಆ ಬೀಡಿನಲ್ಲಿ ಪಾಂಗು ಬನ್ನಾರ್ ಎಂಬ ಹೆಸರಿನ ಬಲ್ಲಾಳರಿದ್ದರು. ಅವರು ತನ್ನ ಹಳೆ ಬೀಡು ತೆಗೆದು ಹೊಸ ಬೀಡು ಕಟ್ಟಿದರು. ಅವರ ಬೀಡಿನ ಕುಲದೈವ ಜುಮಾದಿ. ಹೊಸ ಚಾವಡಿಯಲ್ಲಿ ಕತ್ತರಿಮಂಚ ಮಾಡಿಸಿದರು. ಅದರಲ್ಲಿ ಜುಮಾದಿ ದೈವವನ್ನೂ ಪ್ರತಿಷ್ಠಾಪಿಸಬೇಕು ಮತ್ತು ನೇಮ ಸೇವೆ ನೀಡಬೇಕೆನ್ನುವ ಆಲೋಚನೆ ಮಾಡಿದರು. ಅಂತೆಯೇ ಏಳೆಂಟು ಜನ ಆಳುಗಳನ್ನು ಕರೆದರು. ಬೀಡಿನ ಜುಮಾದಿ ದೈವಕ್ಕೆ ನೇಮ ನೀಡಬೇಕು. ನೀವು ಊರೊಳಗೆ ತಿರುಗಾಡಿ ಪ್ರತಿಯೊಂದು ಮನೆಯಿಂದಲೂ ಸಿರಿ ಮತ್ತು ಸಿಯಾಳ ಕೇಳಿ ತರಬೇಕಂತ ಬಲ್ಲಾಳರು ಆಜ್ಞೆ ಹೊರಡಿಸಿದರು.

ಊರಲ್ಲಿ ತೆರೆದ ಬಾಗಿಲು ಕಟ್ಟಿದ ಮನೆಯಲ್ಲಿ ಸಿರಿ ಮತ್ತು ಸಿಯಾಳ ಕೇಳುತ್ತಾ ಹೋದರು ಬೀಡಿನ ಆಳುಗಳು. ಎಲ್ಲಾ ಕಡೆಯಲ್ಲೂ ಸಿರಿ ಸಿಯಾಳಕೊಟ್ಟರು. ಆದರೆ ಗುಡ್ಡೆ ಮನೆಯ ನಾಗಬೈದ್ಯರು ಮಾತ್ರ ಕೊಡಲಿಲ್ಲ.

ಆಳುಗಳು ನಾಗಬೈದ್ಯರು ಮನೆಯ ಮುಂಭಾಗದಲ್ಲಿ ನಿಂತು, ಮೂರು ಸಲ ನಾಗಬೈದ್ಯರೇ

ನಾಗಬೈದ್ಯರೇ ಅಂತ ಕರೆದರು. ಮೂರನೆಯ ಸಲ ಕರೆಯುವಾಗ, "ಯಾರು ಕರೆಯುವುದು?" ಅಂತ ಹೇಳಿಕೊಂಡು ಅವರು ಬಂದರು.

ಆಗ, "ಪಾಂಗು ಬನ್ನಾರ್ ಕಳುಹಿಸಿದ ಆಳುಗಳು ನಾವು ಜುಮಾದಿ ದೈವದ ಕೋಲಕ್ಕೆ ಸಿರಿ ಮತ್ತು ಸಿಯಾಳ ನೀಡಬೇಕನುತ, ಪಾಂಗು ಬನ್ನಾರ್ ಹೇಳಿದ್ದಾನೆಂದು" ಬಂದ ಆಳುಗಳು ಹೇಳಿದರು.

"ಸಿರಿ .... ಸಿರಿ ... ಎಂದರೆ ಮೂಡೆ ಎಲೆಯ ನೆತ್ತಿಯಲ್ಲ. ಸಿಯಾಳ ಎಂದರೆ ಕಾಸರ್ಕನ ಕಾಯಿಯಲ್ಲ. ಎಲ್ಲೋ ಗುಡ್ಡದಲ್ಲಿದ್ದ ಕಾಟು ಭೂತವನ್ನು ತಂದು ಬೀಡಿನ ಚಾವಡಿಯಲ್ಲಿ ನಂಬಿದ್ದಾರೆಂತ ನನಗೆ ಗೊತ್ತಿಲ್ಲ. ಸೊಸೆ ಮಾಣಿಬಾಲೆ ಚೊಚ್ಚಲ ಹೆರಿಗೆಯಲ್ಲಿ ಗಂಡು ಮಗು ಹೆಡೆದಿದ್ದಾಳೆ. ಅವಳ ಅಮೆ ಸೂತಕ ದಾಟದೆ ನಾನು ಜುಮಾದಿ ದೈವಕ್ಕೆ ಸಿರಿ ಸಿಯಾಳ ಕೊಡಲಾರೆನೆಂತ ಪಾಂಗು ಬನ್ನಾರರ ಹತ್ತಿರ ಹೇಳಿ" ಎಂದು ಒಂದು ರೀತಿಯ ತಾತ್ಸಾರದಿಂದ ಹೇಳಿ ಕಳುಹಿಸಿದರು ನಾಗಬೈದ್ಯರು.

ಆಳುಗಳು ಹೋಗಿ ಪಾಂಗು ಬನ್ನಾರರ ಹತ್ತಿರ ಹಾಗೇ ಹೇಳಿದರು. ಬನ್ನಾರರಿಗೆ ತುಂಬಾ ಬೇಸರವಾಗುತ್ತದೆ. ಆಯ್ತು ಕೊಡದಿದ್ದರೆ ಚಿಂತೆಯಿಲ್ಲ. ಜುಮಾದಿಗೆ ಅವರ ಮನೆಯ ಸಿರಿ ಸಿಯಾಳ ಬೇಕಾದರೆ ಆತನೇ ತರಿಸಿಕೊಂಡಾನು ನೋಡುವ" ಎಂತ ದುಃಖದಿಂದ ತನ್ನಷ್ಟಕ್ಕೆ ಹೇಳಿಕೊಳ್ಳುತ್ತಾರೆ. ಜುಮಾದಿ ದೈವದ ನೇಮಕ್ಕೆ ದಿನವಿಟ್ಟರು. ಕೋಲ ಕಟ್ಟುವ ರಾಮುವನ್ನು ಕರೆದು ಎಣ್ಣೆ ವೀಳ್ಯ ನೀಡಿದರು. ಕೋಲ ಕಟ್ಟಿಸಿ ಆಯಬೀರ ಪಾಡ್ದನ ಹೇಳಿಸಿದರು. ನಾನಾ ತರದ ಬಲಿ, ಮುಖವಾಡಗಳಿಂದ ಕುಣಿಸಿದರು. ಹೀಗೆ ಬಹಳ ವಿಜೃಂಭಣೆಯಿಂದ ನೇಮೋತ್ಸವ ನಡೆಯಿತು. ಅದೇ ಹೊತ್ತಿನಲ್ಲಿ ಜುಮಾದಿ ದೈವವು ಮಾಯೆಯಿಂದ ತನ್ನ ಬಂಟನೋರ್ವನನ್ನು ಸೃಷ್ಠಿಸಿತು. ಆ ಬಂಟನಿಗೆ ಪಾಂಗು ಬನ್ನಾರರ ವೇಷ ತೊಡಿಸಿತು. ಬಳಿಕ ಬಂಟನನ್ನು ನಾಗಬೈದ್ಯರ ಮನೆಯಿಂದ ಸಿರಿ, ಸಿಯಾಳ ತಂದು ಕೊಡಲು ಕಳುಹಿಸಿತು.

ನಟ್ಟೈರುಳು ಮಧ್ಯರಾತ್ರಿ ಕಳೆಯುತ್ತಿದ್ದಂತೆ ಪಾಂಗು ಬನ್ನಾರರ ವೇಷ ಹಾಕಿಕೊಂಡು ಬಂದ, ಬಂಟ ಜುಮಾದಿ ನಾಗಬೈದ್ಯರ ಮನೆಯ ಅಂಗಳದಲ್ಲಿ ಬಂದು ನಿಂತಿತು. ಮನೆಯ ಒಳಗಿದ್ದವರಿಗೆಲ್ಲಾ ಗಮ್ಮತ್ತಿನ ನಿದ್ರೆ. ಬಾಣಂತಿ ಮಾಣಿಬಾಲೆಯ ಚಾಕರಿಯ ಹೆಂಗಸರೆಲ್ಲಾ ಕೋಣೆಯಲ್ಲಿ ಅಲ್ಲಲ್ಲಿ

ಮಲಗಿ ನಿದ್ರಿಸುತ್ತಿದ್ದರು. ಮನೆಯ ಹೊರಗಿಂದ ಯಾರೋ ನಾಗಬ್ಯೆದ್ಯರನ್ನು ಕರೆಯುವುದು ಕೇಳಿಸಿತು. ಹೊರಗಿನ ಚಾವಡಿಯಿಂದ ಆ ಕರೆಗೆ ಯಾರೂ 'ಓ'ಗೊಡ್‌ವುದು ಕೇಳುವುದಿಲ್ಲ.

ಇದು ಬಾಣಂತಿ ಕೋಣೆಯಲ್ಲಿ ಮಲಗಿದ್ದ ಮಾಣಿ ಬಾಲೆಗೆ ಕೇಳುತ್ತದೆ. "ಈ ನಡುರಾತ್ರಿಯಲ್ಲಿ ಯಾರಪ್ಪಾ ಕರೆಯುವುದು?" ಅಂತ ತನ್ನಷ್ಟಕ್ಕೆ ಹೇಳಿಕೊಂಡು, ಮೂರನೆಯ ಕರೆಗೆ 'ಓ..' ಎಂದು ಮರುಧ್ವನಿ ಕೊಟ್ಟಳು. ಬಳಿಕ ಕೈಯಲ್ಲಿ ರಾವಿನ್ನ ಗೆಜ್ಜೆಗತ್ತಿ, ಪಣೆಯುಳ್ಳ ಓಲೆಯ ಛತ್ರಿ ಹಿಡಿದುಕೊಂಡು ಮನೆಯ ಮುಂಬಾಗಿಲಿಗೆ ಬಂದಳು. ಬಾಗಿಲು ದೂಡಿ ದಾರಂದಕ್ಕೆ ಕೈಯಿಟ್ಟು ಹೊರಗೊಮ್ಮೆ ಇಣಿಕಿ ನೋಡಿದಳು. ಕರೆದವರು ಯಾರು ಅಂತ ಕೇಳಿದಳು.

ಇದಿರಲ್ಲಿ ಪಾಂಗು ಬನ್ನಾರ್ ನಿಂತಿರುವುದನ್ನು ನೋಡಿ ಆಶ್ಚರ್ಯಪಟ್ಟಳು. "ಈ ನಡುರಾತ್ರಿಯಲ್ಲಿ ಯಾಕೆ ಬಂದಿದ್ದೀರಿ ಬನ್ನಾರರೇ?" ಎಂದು ಕೇಳಿದಳು.

"ಭಂಗಿ ಎಳೆಯುವ ಅಭ್ಯಾಸವಿದೆ ನನಗೆ. ಒಂದು ಕಿಡಿ ಬೆಂಕಿ ಕೊಡ್ತೀಯಾ ಎಂತ ಕೇಳಲು ಬಂದೆ" ಎಂದು ಉತ್ತರಿಸಿದರು.

"ಹಾಗಾದರೆ ಮಾವ ಚಾಕರಿಗೆ ಎಂಟು ಮಂದಿ ಹೆಣ್ಣಾಳುಗಳನ್ನು ನನಗಾಗಿ ಇಟ್ಟಿದ್ದಾರೆ. ಅವರನ್ನು ಎಬ್ಬಿಸಿ ಬೆಂಕಿ ನೀಡಲು ಹೇಳುತ್ತೇನೆಂದಳು" ಮಾಣಿಬಾಲೆ.

ಹಗಲಿಡೀ ನಿನ್ನ ಚಾಕರಿ ಮಾಡಿ ಸೋತು ಮಲಗಿದ್ದಾರವರು. ಸುಖ ನಿದ್ದೆಯಲ್ಲಿದ್ದಾರೆ. ಪಾಪ ಅವರನ್ನು ಎಬ್ಬಿಸಬೇಡ. ನೀನೇ ತಂದು ಕೊಡು ಎಂದರು ಬನ್ನಾರರು.

ಮೂರು ದಿನದ ಬಾಣಂತಿ ಮಾಣಿಬಾಲೆ. ಬನ್ನಾರರ ಮಾತನ್ನು ಸತ್ಯವೆಂದು ನಂಬಿದಳು. ಹೊಸ್ತಿಲ ಒಳಗೆ ನಿಂತು ಹೊರಗೆ ಕೈ ನೀಡಿ ಕೆಂಡ ಕೊಟ್ಟಳು. ನೀಡಿದ ಕೈಯನ್ನು ಹೊರಗೆಳೆದು ಆಕೆಯನ್ನು ಮಾಯ ಮಾಡಿದರು. ಪಾಂಗು ಬನ್ನಾರರ ವೇಷದ ಬಂಟ ಜುಮಾದಿ.

"ಒಂದು ಸಿರಿ ಒಂದು ಸೀಯಾಳಕ್ಕೆ ನಿನ್ನ ಮಾವ ಆಸೆ ಮಾಡಿದರು. ನನ್ನನ್ನು ಕಾಡಿನಲ್ಲಿದ್ದ ಕಾಟು ಜುಮಾದಿ ಎಂದರು. ನಾನೀಗ ಕಾಟು ಜುಮಾದಿಯಾ ಅಥವಾ ದೈವ ಜುಮಾದಿಯ ಅಂತ ನೋಡೆಂದು", ದೈವ ಜುಮಾದಿ ತನ್ನ ಪ್ರತ್ಯಕ್ಷ ರೂಪ ತೋರಿಸಿ ಹೇಳಿತು.

ಆಗ ಮಾಯಕದಲ್ಲಿದ್ದ ಮಾಣಿಬಾಲೆ ಹೇಳಿದಳು. "ಅಯ್ಯೋ, ದೈವಜುಮಾದಿಯೇ ನನಗೀಗ ನೀನು ಮೋಸ ಮಾಡಿದೆ. ಸಂತಾನ ಭಾಗ್ಯವಿಲ್ಲದೆ ನಾನು ಶೋಕದಲ್ಲಿದ್ದೆ ಬೆರ್ಮೆರ ಆಶೀರ್ವಾದದಿಂದ ಚೆಂದದ ಗಂಡು ಮಗುವನ್ನು ಹೆತ್ತೆ ಅದರ ಅಂದ ಚೆಂದವನ್ನು ನೋಡಿ ನಲಿವ ಭಾಗ್ಯ ನನಗಿಲ್ಲದೆ ಹೋಯ್ತು. ನನ್ನ ಮಾವನ ಮೇಲಿನ ದ್ವೇಷವನ್ನು ನನ್ನ ಮೇಲೆ ಸಾಧಿಸಿದೆ. ಒಂದು ಸಿರಿ ಒಂದು ಸಿಯಾಳಕ್ಕೆ ನನ್ನ ಮಾವ ಆಸೆ ಮಾಡಿದರು. ನನ್ನನ್ನು ನಿನ್ನ ಕೈಗೆ ಕೊಟ್ಟರು. ಆದರೆ ಚಿಂತಿಲ್ಲ. ತೊಟ್ಟಿಲಲ್ಲಿ ಮಲಗಿದ್ದ ಆ ನನ್ನಪ್ರೀತಿಯ ಮಗುವನ್ನು ನನ್ನ ಕೈಗೆ ತಂದುಕೊಡು ಎಂದು ಮಾಯಕದ ಮಾಣಿಬಾಲೆ ದೈವ ಜುಮಾದಿಯ ಹತ್ತಿರ ಪ್ರಾರ್ಥನೆ ಮಾಡಿಕೊಂಡಳು.

ಆಗ ದೈವ ಜುಮಾದಿ "ನೀನು ದುಃಖ ಮಾಡಬೇಡ ಮಾಣಿಬಾಲೆ .. ನಿನ್ನ ಮಗುವನ್ನೂ ನಿನ್ನ ಕೈಗೆ ತಂದೊಪ್ಪಿಸುತ್ತೇನೆಂದು" ಸಮಾಧಾನ ಹೇಳಿತು.

ಆ ಮೇಲೆ ಮಗು ಮಲಗಿಸಿದ ಬಾಣಂತಿ ಕೋಣೆಯ ಕಿಟಕಿಯ ಬಳಿಗೆ ಹೋಗಿ ಮೆಲ್ಲನೆ ತೊಟ್ಟಿಲು, ಮಗುವನ್ನು ಹೊರಗೆಳೆಯಿತು ದೈವ ಜುಮಾದಿ ಆಗ ಮಗುವಿನ ಕೈ ಕಿಟಕಿಯ ದಾರಕ್ಕೆ ತಾಗಿ ಬಲದ ಕೈ ಮುರಿಯಿತು. ಅದರ ನೋವಿಗೆ ಮಗು ಬಿಕ್ಕಿ ಬಿಕ್ಕಿ ಅಳತೊಡಗಿತು. ಇದು ನಿದ್ದೆಯಲ್ಲಿದ್ದ ನಾಗಬೈದ್ಯರಿಗೆ ಕೇಳಿಸುತ್ತದೆ. ಅವರು ನಿದ್ದೆಯಿಂದ ತಡಬಡನೆ ಎದ್ದರು. "ಮಾಣೀ... ಮಾಣೀ... ಎಂದು ಸೊಸೆಯನ್ನು ಕರೆದು ಆಕೆ ಮಲಗಿದ್ದ ಬಾಣಂತಿ ಕೋಣೆಯತ್ತ ಹೋದರು. ಅಷ್ಟರೊಳಗೆ ಮಗುವನ್ನು ಕೊಂಡು ಹೋಗಿ ದೈವ ಜುಮಾದಿ ಮಾಣಿಬಾಲೆಯ ಕೈಗೆ ಕೊಟ್ಟಾಗಿತ್ತು. ಕೋಣೆ ಖಾಲಿ ಬಾಣಂತಿ ಮಗು ಇಬ್ಬರೂ ಇಲ್ಲ. ನಾಗಬೈದ್ಯರು ಶೋಕದಿಂದ ಅಳುತ್ತಾರೆ.

ಆಗ ಮಾಣಿಬಾಲೆಯ ಮಾಯಕದ ಸ್ವರ ಕಿಟಕಿಯ ಹೊರಗಿಂದ ಕೇಳುತ್ತದೆ. "ಅಯ್ಯೋ.. ಮಾವ ನನ್ನನ್ನೀಗ ಯಾಕೆ ಕರೆಯುತ್ತೀರಿ? ಯಾಕೆ ಶೋಕ ಬಿಡುತ್ತೀರಿ? ನಿಮ್ಮ ಇಷ್ಟು ದೊಡ್ಡ ಆಸ್ತಿಯಲ್ಲಿ ಒಂದು ಸಿರಿ ಒಂದು ಸಿಯಾಳವೂ ಇಲ್ಲದೆ ಹೋಯ್ತು. ನನ್ನನ್ನು ಜುಮಾದಿಯೊಟ್ಟಿಗೆ ಸೇರಿಸಿದಿರಿ. ನಿಮಗೆ ನಾನಿನ್ನು ನೋಡಲು ಸಿಗುವುದಿಲ್ಲ. ನಾನು ಬೌತಿಕ ಜಗತ್ತಿನಿಂದ ಮುಕ್ತಳಾಗಿ ಮಾಯಾ ಲೋಕಕ್ಕೆ ಸೇರಿದ್ದೇನೆ. ಇನ್ನು ನನ್ನ ಆಸೆ ಮಾಡಬೇಡಿ. ಆದರೆ ಮಾತ್ರ ನಿಮ್ಮ ಹೊಟ್ಟೆ ಉರಿಸಿದಂತೆ. ಪಾಂಗು ಬನ್ನಾರರ ಹೊಟ್ಟೆಯನ್ನು ಉರಿಸದೆ ಬಿಡಲಾರೆ. ಅವರ ಮಾತನ್ನು ಸತ್ಯವೆಂದು

ನಂಬಿದೆ. ಬಾಣಂತಿ ಎದ್ದು ಹೋಗಿ ಭಂಗಿ ಎಳೆಯಲು ಬೆಂಕಿ ನೀಡಿದೆ. ನನಗೀಗ ಈ ಗತಿ ಬಂತು. ಜುಮಾದಿ ನನಗೆ ಮೋಸ ಮಾಡಿದ. ಇನ್ನು ಮೇಲೆ ನನ್ನ ಆಸೆ ಬಿಟ್ಟು ಬಿಡಿ ಮಾವ ನೀವು ಸಮಾಧಾನದಿಂದಿರಿ...." ಎಂದು ಹೇಳಿ ಆ ಮಾಯಕದ ಸ್ವರ ಬಳಿಕ ಕತ್ತಲ್ಲಿ ಕರಗಿ ಹೋಯ್ತು.

ನಾಗಬೈದ್ಯರಿಗೆ ತನ್ನ ತಪ್ಪಿನ ಅರಿವಾಯ್ತು. ತನ್ನಿಂದಾಗಿ ತನ್ನ ಪ್ರೀತಿಯ ಸೊಸೆಗೆ ಈ ಗತಿ ಬಂತಲ್ಲಾವೆಂತ ಭಾರೀ ದುಃಖವಾಯ್ತು. ಅವರು ಶೋಕದಿಂದ ಬಂದು ತನ್ನ ಶಯ್ಯಾಗಾರದಲ್ಲಿ ಕಣ್ಣೀರಿಡುತ್ತಾ ಮಲಗುತ್ತಾರೆ.

ಇತ್ತ ಮಾಯದ ಮಾಣಿಬಾಲೆ ತನ್ನೊಡನಿದ್ದ ತೊಟ್ಟಿಲು ಮಗುವನ್ನು ಬಂಟನ ಕೈಗಿತ್ತಳು. ಬಳಿಕ ಜುಮಾದಿಯೊಂದಿಗೆ ಪಾಂಗು ಬನ್ನಾರರ ಚಾವಡಿಗೆ ಹೋದಳು. ಅಲ್ಲಿ ಜುಮಾದಿ ದೈವದ ಕೋಲ ನಡೆಯುತ್ತಿತ್ತು. ಕೆಂದಾಳೆಯ ಸೀಯಾಳ, ಕಪಿಲೆ ದನದ ಹಾಲು, ತುಂಬೆ ಹೂವಿನ ಬಲಿಯಾಗುತ್ತಿತ್ತು. ಆ ಮೇಲೆ ಕೋಲ ಮುಗಿದು, ಭಂಡಾರ ಕೆಳಗಿಳಿಸಿತು.

ಮರುದಿನ ಸೂರ್ಯೋದಯವಾಗುತ್ತಿದ್ದಂತೆ, ಬನ್ನಾರರ ಪ್ರೀತಿಯ ಸೊಸೆಯನ್ನು ಮಾಯದ ಮಾಣಿಬಾಲೆ ತನ್ನ ಮಾಯೆಯಿಂದ ಸ್ನಾನಕ್ಕೆ ಕರೆದುಕೊಂಡು ಹೋಗುತ್ತಾಳೆ. ಆಕೆ ಸಂತೋಷದಿಂದ ಮಿಂದು ಮುಡಿಯಿಟ್ಟು ಹಿಂತಿರುಗುವಾಗ ಆಕೆಯನ್ನು ಹಿಂದಿನಿಂದ ಕೆರೆಗೆ ದೂಡಿ ಬಿಡುತ್ತಾಳೆ. ಆಕೆ ನೀರಿಗೆ ಬಿದ್ದು ಪ್ರಾಣ ಬಿಡುತ್ತಾಳೆ. ಪಾಂಗು ಬನ್ನಾರರು ತನಗೆ ಮಾಡಿದ ಮೋಸದ ಪ್ರತೀಕಾಲ ತೆಗೆದುಕೊಳ್ಳುತ್ತಾಳೆ. ಆ ಮೇಲೆ ಮಾಣಿಬಾಲೆಗೆ ಮಾಯಂದಾಳ್ ಎನ್ನುವ ಹೆಸರು ಬರುತ್ತದೆ.

ಪಾಂಗು ಬನ್ನಾರರ ಸೊಸೆಯ ಪ್ರೇತ ಬಳಿಕ ಮಾಯಂದಾಳಳ ಜೊತೆಗೆ ಸೇರಿಕೊಳ್ಳುತ್ತದೆ. ಈ ಪ್ರೇತ, ಬಂಟ ಜುಮಾದಿ, ಮಾಯಂದಾಳ್ ಈ ಮೂವರೂ ಬಳಿಕ ಒಟ್ಟು ಸೇರಿಕೊಂಡು ತಿರುಗಾಡಲು ಹೊರಡುತ್ತಾರೆ. ತುಳುನಾಡಿನ ಮೂಲೆ ಮೂಲೆ ಸಂಚರಿಸಿ ಎಲ್ಲಿ ಅನ್ಯಾಯವಾಗಿದೆಯೋ ಅಲ್ಲಿ ನ್ಯಾಯ ಒದಗಿಸಿ, ಸತ್ಯವನ್ನು ಎತ್ತಿ ಹಿಡಿದು ಧರ್ಮಕ್ಕೆ ಜಯ ಒದಗಿಸಿ ಕೊಡುತ್ತಾರೆ.

ಹೀಗೆಯೇ ತಿರುಗಾಡುತ್ತಿದ್ದಂತೆ ಮಾಯಂದಾಳ್‌ಗೆ ತಾನೊಬ್ಬಳು ಮೈಲಿಗೆಯ ಹೆಣ್ಣು ಮಗಳು ಎನ್ನುವ ಕೀಳರಿಮೆ ಮಾಡಿಕೊಳ್ಳುತ್ತದೆ. ತಾನು ಮೂರು ದಿನದ ಬಾಣಂತಿ ಹೆಣ್ಣೆ ಹೊರಟು ಬಂದವಳು.

ತನ್ನ ಮೈಯ ಸೂತಕ ಕಳೆದಿಲ್ಲ. ಇನ್ನೂ ನಾನು ಮೈಲಿಗೆಯಲ್ಲೇ ಇದ್ದೇನೆ. ಗಂಗಾನದಿಗೆ ಹೋಗಿ ಪುಣ್ಯ ಸ್ನಾನ ಮಾಡಿಕೊಂಡು ಬಂದು ಪರಿಶುದ್ಧಳಾಗಬೇಕು ಎನ್ನುವ ಮನಸ್ಸಾಗುತ್ತದೆ.

ಮಗುವಿನ ತೊಟ್ಟಿಲನ್ನು ಬಂಟನ ಕೈಯಲ್ಲಿ ಹೊರಿಸುತ್ತಾಳೆ. ಮಗಮದು ಮಾರನನ್ನು ಬರಲಿಕ್ಕೆ ಹೇಳಿ, ಜುಮಾದಿಯನ್ನು ತನ್ನ ಹಿಂದೆ ಕರೆದುಕೊಂಡು, ಗಂಗಾಸ್ನಾನಕ್ಕೆ ಪಯಣ ಬೆಳೆಸುತ್ತಾಳೆ. ಉಳ್ಳಾಲದ ಬಳಿ ಬರುವಾಗ ಮೊಗೇರರ ಹೆಣ್ಣೋರ್ವಳು ಹೊಳೆಯಿಂದ 'ಮಾರ್ನಾಯಿ (ಮೀನು) ತೆಗೆಯುತ್ತಿದ್ದವಳು ಸಿಕ್ಕಿದಳು. ಆಕೆಗೆ ಇವಳ ಪರಿಚಯ ಸಿಕ್ಕಿತು. "ತಾವು ಈ ಕಡೆ ಎಲ್ಲಿಗೆ ಹೊರಟವರು?" ಅಂತ ಪ್ರಶ್ನಿಸಿದಳು.

ಆಕೆ ತನ್ನ ಗುರುತು ಹಿಡಿದುದನ್ನು ತಿಳಿದು ಮಾಯಂದಾಳ್‌ಗೆ ಸಮಾದಾನವಾಗುವುದಿಲ್ಲ. "ಇನ್ನು ಹೋಗಿ ನನ್ನ ಮಾವನ ಹತ್ತಿರ ಈ ಸಂಗತಿ ಹೇಳಬೇಡ" ಎಂದು ಹೇಳಿ ತನ್ನ ಮಡಿಲೊಳಗಿದ್ದ ಬೆಳ್ತಿಗೆ ಅಕ್ಕಿಯನ್ನು ತೆಗೆದು ಮಂತ್ರಿಸಿ ಆಕೆಯ ಮೇಲೆ ಎಸೆಯುತ್ತಾಳೆ. ಬಳಿಕ ತನ್ನ ಮಗುವಿನ ತೊಟ್ಟಿಲನ್ನು ಆಕೆಯ ಕೈಗೆ ನೀಡುತ್ತಾಳೆ.

ಆ ಮೇಲೆ ಕದ್ರಿಯ ಪದವಿಗೆ ಬರುತ್ತಾಳೆ. ಮಗುವಿನ ತೊಟ್ಟಿಲನ್ನು ಗೋಳಿಯ ಮರಕ್ಕೆ ಕಟ್ಟುತ್ತಾಳೆ. ಮಗುವಿಗೆ ಹಾಲುಣಿಸಿ ತೊಟ್ಟಿಲಲ್ಲಿ ಮಲಗಿಸುತ್ತಾಳೆ. ನಾರಾಯಣದೇವರ ಸ್ತುತಿ ಹೇಳುತ್ತಾ ಜೋಗುಳ ಹಾಡಿ ತೊಟ್ಟಿಲು ತೂಗುತ್ತಾಳೆ.

ಆಗ ಅಲ್ಲಿಗೆ ಐದು ಮಂದಿ ಅಪರಿಚಿತ ಹೆಂಗಸರು ಬಂದು, "ಮೇಲ್ಜಾತಿಯವರು ಹಾಡುವ ಪದ್ಯ ಕೇಳಿ ಮಗುವನ್ನು ತೂಗುವವರು ಯಾರು? ಎಂತ ಕೇಳುತ್ತಾರೆ.

"ಮೇಲ್ಜಾತಿ ಕೆಳಜಾತಿ ಎನ್ನುವ ಹೆಸರೆತ್ತ ಬೇಡಿ ಹೆಂಗಸರೇ. ಭಗವಂತನ ಸೃಷ್ಟಿಯಲ್ಲಿ ನಾವೆಲ್ಲ ಒಂದೇ ಜಾತಿ ಎಂತ, ನೀತಿ ತಿಳಿದು ಮಾತನಾಡಿ" ಎಂದು ಮಾಯಂದಾಳ್ ಅವರಿಗೆ ಕೋಪದಿಂದ ಉತ್ತರಿಸುತ್ತಾಳೆ.

ಆ ಐವರು ಹೆಂಗಸರು ಅಹಂಕಾರದಿಂದ ಬೀಗಿದ್ದರು. ಮಾಯಂದಾಳ್‌ನ ನೀತಿಯ ಮಾತು ಅವರ ಕಿವಿಯ ಬಳಿಗೆ ಹೋಗಲಿಲ್ಲ". ನಿನ್ನ ನೀತಿ ಗೀತಿ ನಮಗೆ ಬೇಡ ಹೆಂಗಸೇ ಮೊದಲು ನೀನು

ಪದ್ಯ ಹೇಳುವುದನ್ನು ನಿಲ್ಲಿಸು" ಎಂದು ಕೋಪದಿಂದ ಹೇಳಿದರು. ಮತ್ತು ಅವರು ಕಾಲು ತೆರೆದು ಜಗಳಕ್ಕೆ ಬಂದರು. ಮಾಯಂದಾಳ್ ಬಳಿಗೆ ಹೋದರು. ಆಗ ಮಾಯಂದಾಳ್‌ಗೆ ಮತ್ತಷ್ಟು ಕೋಪ ಬಂತು. ಅವರಿಗೆ ಕಲ್ಲಾಗಿ ಹೋಗಿ ಎಂತ ಶಾಪ ಕೊಟ್ಟಳು. ಆಗ ಆ ಐವರು ಹೆಂಗಸರೂ ಕಲ್ಲಾಗಿ ಬಿದ್ದರು. ಅವರ ಅಹಂಕಾರಕ್ಕೆ ತಕ್ಕ ಶಾಸ್ತಿಯಾಯಿತು. ಆ ಮೇಲೆ ಮಾಯಂದಾಳ್ ತನ್ನ ಪರಿವಾರದ ಜೊತೆಗೆ ಮರಳಿ ಪಯಣ ಮುಂದುವರಿಸಿದಳು.

ಗಂಗಾನದಿಯಲ್ಲಿ ಮಿಂದು ಪರಿಶುದ್ಧಳಾಗಬೇಕು ಎನ್ನುವ ಆಸೆ ಬಲವಾಗುತ್ತಾ ಹೋಗುತ್ತದೆ. ಆಕೆ ಕಾಡುಗುಡ್ಡೆಯ ದಾರಿ ಹಿಡಿದಳು. ಕಾಡಿನ ಹಕ್ಕಿಗಳ ಚಿಲಿಪಿಲಿ ಗಾನ ಕೇಳಿಕೊಂಡಳು. ದಾರಿಯಲ್ಲಿ ಆಡುತ್ತಿದ್ದ ಜಿಂಕೆ ಕಡವೆಗಳ ಚೆಲುವನ್ನು ನೋಡಿದಳು. ಗಾಳಿಯಲ್ಲಿ ಹಾರಾಡುವ ಆಕಾಶದ ಮೋಡಗಳನ್ನು ಕಂಡಳು. ಹೀಗೆ ಪ್ರಕೃತಿಯ ಚೆಲುವನ್ನು ಅಸ್ವಾದಿಸುತ್ತಾ, ಸಂತೋಷಪಡುತ್ತಾ ದಾರಿ ಸಾಗಿತು.

ಗಂಗಾನದಿಯ ಬಳಿಯಲ್ಲಿ ಭಾರೀ ಗಾತ್ರದ ಓರ್ವ ಬ್ರಹ್ಮ ರಾಕ್ಷಸನಿದ್ದ. ಆತ ನದಿಗೆ ಸ್ನಾನಕ್ಕೆ

ಬಂದವರನ್ನೆಲ್ಲಾ ತುಂಬಾ ಹೆದರಿಸುತ್ತಿದ್ದ. ತುಳುನಾಡಿನ ವೀರರಾದ ಕೋಟಿ ಚೆನ್ನಯರು ಇಲ್ಲಿಗೆ ಪುಣ್ಯ ಸ್ನಾನಕ್ಕೆ ಬರುತ್ತಾರೆ. ಅವರನ್ನು ಬ್ರಹ್ಮರಾಕ್ಷಸ ಅಡ್ಡಗಟ್ಟುತ್ತಾನೆ. ಆಗ ಅವರು ಬ್ರಹ್ಮರಾಕ್ಷಸನನ್ನು ಯುದ್ಧಮಾಡಿ ಕೊಲ್ಲುತ್ತಾರೆ. ಆಮೇಲೆ ಗಂಗಾನದಿಗಿಳಿದು ಮಿಂದು ಪರಿಶುದ್ಧರಾಗುತ್ತಾರೆ. ಬಳಿಕ ಕಲಶದಲ್ಲಿ ನೀರು ತುಂಬಿಕೊಂಡು ಮನೆಯ ದಾರಿ ಹಿಡಿಯುತ್ತಾರೆ.

ದಾರಿಯಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡಲು ಬರುತ್ತಿದ್ದ ಮಾಯಂದಾಳ್ ಸಿಗುತ್ತಾಳೆ. ಅವಳೊಡನೆ "ಜಕ್ಕ ಜವ್ವನಗಿತ್ತಿಯಾದ ಒಂಟಿ ಹೆಣ್ಣು ನೀನು ಎಲ್ಲಿಗೆ ಹೋಗುತ್ತಿರುವವಳು? ನೀನು ಯಾರು? ಎಲ್ಲಿಂದ ಬರುತ್ತಿರುವುದು? ಎನ್ನುವ ಸಂಗತಿಯನ್ನು ನೀನು ನಮ್ಮನ್ನು ಒಡಹುಟ್ಟಿದ ಅಣ್ಣಂದಿರು ಎಂದು ಭಾವಿಸಿ ತಿಳಿಸಬೇಕು ಎಂತ ಕೋಟಿ ಚೆನ್ನಯರು ಕೇಳಿಕೊಳ್ಳುತ್ತಾರೆ.

ಇವರನ್ನು ನೋಡಿದ ಕೂಡಲೇ ಏನೋ ಒಂದು ರೀತಿಯ ಭಕ್ತಿ ಭಾವನೆ ಉಂಟಾಯ್ತು ಮಾಯಂದಾಳ್‌ಗೆ ಅವರ ಮುಖಗಳು ಸೂರ್ಯನಂತೆ ತೇಜಸ್ಸಿನಿಂದ ಹೊಳೆಯುತ್ತಿತ್ತು. ಕಣ್ಣುಗಳಲ್ಲಿ ಹೊಳೆಯುತ್ತಿರುವ ಚಂದ್ರನ ಕಾಂತಿ. ಅವರ ಆ ಉದ್ದ ಅಜಾನುಬಾಹುಗಳು ಅಬಲೆಯರಿಗೆ ಅಭಯದಾನ ನೀಡುವಂತಿದ್ದುವು. ಆಕೆ ಅವರನ್ನು ಒಡಹುಟ್ಟಿದ ಅಣ್ಣಂದಿರೆಂದು ಭಾವಿಸಿ ತನ್ನ ಸಂಗತಿಯನ್ನು ಹೇಳತೊಡಗಿದಳು.

ನಾನು ಗುಡ್ಡೆಮನೆ ನಾಗಬೈದ್ಯರ ಪ್ರೀತಿಯ ಸೊಸೆ. ಪೊಯ್ಯೆಮುಡಿಪಲ್ಲ ಬರ್ಕೆಯ ಬಾಲಸಾಥಬೈದ್ಯರ ಮಮತೆಯ ಮಡದಿ ಎಷ್ಟೋ ಸಮಯ ನಮಗೆ ಸಂತಾನಭಾಗ್ಯ ಇದ್ದಿರಲಿಲ್ಲ. ಬ್ರಹ್ಮದೇವರ ಅನುಗ್ರಹದಿಂದ ಇತ್ತೀಚೆಗೆ ನಾನೊಂದು ಸುಂದರವಾದ ಗಂಡುಮಗುವನ್ನು ಹಡೆದೆ. ಹೆತ್ತು ಮೂರು ದಿನವಾಗುವಾಗ ಪಾಂಗು ಬನ್ನಾರರ ವೇಷ ಹಾಕಿಕೊಂಡು ಮಾಯಾ ಜುಮಾದಿ ಬಂದು ಬೆಂಕಿ ಕೇಳಿದರು. ಅವರ ಕಪಟ ವೇಷ ನನಗೆ ತಿಳಿಯದೇ ಹೋಯ್ತು. ನಾನು ಮೂರು ದಿನದ ಬಾಣಂತಿ ಎದ್ದು ಬಂದು ಅವರಿಗೆ ಭಂಗಿ ಮಾಯ ಮಾಡಿದರು. ಪಾಂಗು ಬನ್ನಾರ್ ಮಾಡಿಸಿದ ಕೋಲಕ್ಕೆ ನನ್ನ ಮಾವ ಸಿರಿ, ಸಿಯಾಳ ಕೊಡಲಿಲ್ಲ. ಅದರ ದ್ವೇಷವನ್ನು ಜುಮಾದಿ ದೈವ ನನ್ನ ಮೇಲೆ ಸಾಧಿಸಿಕೊಂಡರು.

ಆ ನಂತರ ನಾನು ಮಾಯ ಲೋಕದಲ್ಲಿದ್ದುಕೊಂಡು ತಿರುಗಾಡುತ್ತಿದ್ದೇನೆ. ಮೂರು ದಿನದ ಬಾಣಂತಿ ನಾನು. ಮೈ ಶುದ್ಧವಾಗಲಿಲ್ಲ ಎನ್ನುವ ಕೀಳರಿಮೆ ನನ್ನೊಳಗಿದೆ. ಇದರಿಂದ ನನಗೆ ಮುಕ್ತಿ ದೊರೆಯಬೇಕಾದರೆ ಗಂಗಾ ಸ್ನಾನ ಮಾಡಿ ಬಂದು ಪರಿಶುದ್ಧಳಾಗಬೇಕು ಎನ್ನುವ ಆಸೆ ನನ್ನದು. ಆಗ ನನ್ನ ಮೈ ಮನಸ್ಸು ಗಳಿಗೆ ಖುಷಿ ಸಿಗುತ್ತದೆ ಎಂದು ಕೋಟಿಚೆನ್ನಯರಲ್ಲಿ ತನ್ನ ಇಚ್ಛೆಯನ್ನು ತಿಳಿಸಿ ಅವರ ಕಾಲುಗಳಿಗೆ ಅಡ್ಡ ಬಿದ್ದಳು.

ಆಗ ಅವರು ಆಕೆಯನ್ನು ಪ್ರೀತಿಯಿಂದ ಎತ್ತಿ ಹಿಡಿದು, "ನೀನು ನಮ್ಮ ಇನ್ನು ಮುಂದಿನ ಪ್ರೀತಿಯ ತಂಗಿ. ನಿನ್ನನ್ನು ನಾವು ರಕ್ಷಣೆ ಮಾಡುತ್ತೇವೆಂದು ಅಭಯ ನೀಡಿದರು. ಅಲ್ಲದೆ ಒಂಟಿ ಹೆಣ್ಣು ಹೆಂಗಸು ಗಂಗಾಸ್ನಾನ ಮಾಡಲು ನೀನು ಅಲ್ಲಿಯ ತನಕ ಹೋಗಬೇಡ. ನಾವು ಮಿಂದು ಪರಿಶುದ್ಧರಾಗಿ ಕಲಶದಲ್ಲಿ ತುಂಬಿಕೊಂಡು ತಂದ ಗಂಗೆಯ ನೀರಿದೆ. ಅದನ್ನೇ ನೀನು ಮಿಂದು ಪರಿಶುದ್ಧಳಾಗು ಎಂದು ತಾವು ತಂದ ಗಂಗೆಯ ನೀರನ್ನು ಮೀಯಲು ಮಾಯಂದಾಳ್‌ಗೆ ನೀಡುತ್ತಾರೆ.

ಬಳಿಕ ಅವಳು ಅದನ್ನು ಭಯಭಕ್ತಿಯಿಂದ ಮಿಂದು ಪರಿಶುದ್ಧಳಾಗುತ್ತಾಳೆ. ಅವಳ ಮನಸ್ಸಿನೊಳಗಿದ್ದ ಕೀಳರಿಮೆ ಹೋಗುತ್ತದೆ. ಮೈಮನಗಳಲ್ಲಿ ಸಂತೋಷ ತುಂಬಿ ಹರಿದು, ದೈವೀಕ ಶಕ್ತಿಯ ಸಂಚಾರವಾದಂತೆ ಆಗುತ್ತದೆ. ಆ ನಂತರ ಆಕೆ ಕೋಟಿ ಚೆನ್ನಯರ ಜೊತೆಗೆ ತುಳುನಾಡು ಇಡೀ ಸಂಚಾರ ಮಾಡುತ್ತಾಳೆ.

ತೆಂಕು ನಾಡುನಲ್ಲಿ ಶಿರ್ವ, ಮಟ್ಟಾರು, ಬೋಳ ಮಲ್ಲಾರ್, ಕಟಪಾಡಿ ಅರಸರನ್ನು ಕಂಡಳು. ಬಡಗು ದಿಕ್ಕಿನಲ್ಲಿ ಸೇಮಿಗಲ್ಲ ನದಿ ದಾಟಿ ಪೆರ್ಡೂರಿನ ಸೂಡರನ್ನು ಕಂಡಳು. ಅನ್ಯಾಯ ನಡೆದಲ್ಲಿ ನ್ಯಾಯವನ್ನು ದೊರಕಿಸಿಕೊಟ್ಟಳು. ಅಸತ್ಯ ನಡೆದಲ್ಲಿ ಸತ್ಯವನ್ನು ಉಳಿಸಿಕೊಟ್ಟಳು. ಅಧರ್ಮ ನಡೆದಲ್ಲಿ ಧರ್ಮವನ್ನು ಎತ್ತಿ ಹಿಡಿದಳು. ಹೀಗೆ ತುಳುನಾಡಿನ ಧರ್ಮದೇವತೆಯಾಗಿ ಮಾಯಂದಾಳ್ ಸೂರ್ಯಚಂದ್ರರ ಹಾಗೇ ಕೀರ್ತಿಶಾಲಿಯಾದಳು.

ತುಳು ನಾಡ ವೀರನಾದ ಕೋಟಿ ಚೆನ್ನಯರು ತಮ್ಮ ಜೊತೆಗೆ ಮಾಯಂದಾಳ್‌ಗೆ ಕೂಡಾ ಸೇವೆ ಸಿಗಬೇಕು ಎಂದು ವರ ನೀಡುತ್ತಾರೆ. ಆದ್ದರಿಂದ ಕೋಟಿ ಚೆನ್ನಯರ ಗರಡಿ ಇದ್ದಲ್ಲಿ ಮಾಯಂದಾಳ್‌ಗೆ ಕೂಡಾ ಕೆಲವು ಕಡೆಗುಡಿ ಕಟ್ಟಿಸ್ತಾರೆ. ಅಂತೆಯೇ ನೇಮವೂ ಕೂಡಾ ಜರಗುತ್ತದೆ.

ತುಳುನಾಡಿನ ಜನರು ಮಾಯಾಂದಾಲ್‌ನ್ನು ಮುತ್ತೈದೆ ಭಾಗ್ಯ, ಸಂತಾನ ಭಾಗ್ಯ, ಸಿರಿ ಸಂಪತ್ತು ನೀಡುವ ದೇವತೆಯೆಂತಲೂ ಭಯಭಕ್ತಿಯಿಂದ ನಂಬಿ ಪೂಜಿಸುತ್ತಾರೆ. ತಬುರಜ್ಜ ತೆಂಬರೆ ಬಾರಿಸಿ ಕತೆ ಹೇಳಿ ಮುಗಿಸಿದ. ಆಗ ಮಕ್ಕಳೇನು ಇಡೀ ಊರಿನ ಜನರೇ ಅಂಗಳ ತುಂಬಾ ಸೇರಿದ್ದರು. ತಬುರಜ್ಜನ ಉತ್ಸಾಹ ಲಗಾಮ್ ಹರಿದ ಕುದುರೆಯಂತಾಗಿತ್ತು. ಆತ ಮತ್ತೊಮ್ಮೆ ತೆಂಬರೆ ಬಾರಿಸಿ ಕುಣಿದು ಮಕ್ಕಳನ್ನೆಲ್ಲಾ ಸುತ್ತ ಸೇರಿಸಿಕೊಂಡ.

"ಮಕ್ಕಳಪ್ಪಾ... ಮಕ್ಕಳು...! ಮಕ್ಕಳು.... ಮಕ್ಕಳು ಹೊಡೆದಾಡಿಕೊಂಡರು. ದಪ್ಪ ಕಿವಿಯ ಮಕ್ಕಳು....! ಸಿಂಬಳ ಸುರಿವ ಮಕ್ಕಳು! ಚಿಗರೆಗಣ್ಣಿನ ಮಕ್ಕಳಿಗೆ ಏನು ಬೇಕು ಹೇಳಿ..." ಎಂದು ತಬುರಜ್ಜ ಮಕ್ಕಳ ಪದ ಹೇಳಲು ಶುರು ಮಾಡಿದ. ಆಗ ಮಕ್ಕಳು ಕೂಡಾ ಆತನ ಸುತ್ತ ಚಪ್ಪಾಳೆ ತಟ್ಟಿ ಕುಣಿದವು. ಅಜ್ಜನ ಕತೆಯ ಕಿನ್ನರ ಜೋಗಿಯಂತೆ ಕಿನ್ನರಿಯ ಮಾದಕ ಸ್ವರಕ್ಕೆ ಮಕ್ಕಳು ಹುಚ್ಚುಗಟ್ಟಿ ನಲಿದಂತೆ. ಚಾವಡಿಯಿಂದ ಅಜ್ಜನ ಕರೆ ಬಂತು. ತಬುರಜ್ಜ ಕುಣಿತ ನಿಲ್ಲಿಸಿದ. ಹೊಟ್ಟೆ ತುಂಬಾ ಊಟ ಮಾಡಿದ. ಬಾಯಿ ತುಂಬಾ ಅಜ್ಜ ನೀಡಿದ ತಾಂಬೂಲ ಜಗಿದ. ಅಕ್ಕಿ ತೆಂಗಿನ ಕಾಯಿಗಳನ್ನು ತನ್ನ ಜೋಳಿಗೆಯಲ್ಲಿ ತುಂಬಿಸಿಕೊಂಡ. ತೆಂಬರೆಯನ್ನು ಮರಳಿ ಬಗಲಿಗೇರಿಸಿಕೊಂಡ. ಮುಖ ತುಂಬಾ ನಗು ಅರಳಿಸಿಕೊಂಡು ತಬುರಜ್ಜ ಹಿಂತಿರುಗಿ ನೋಡುವಾಗ ಮಕ್ಕಳ ಕಣ್ಣುಗಳು ಹನಿಗೂಡಿದ್ದುವು.

O

ಜೋಕ್ಲೆಗಾದ್ ತುಳು ಕತೆಕ್ಕುಲು

1.	ಕೋಟಿ- ಚೆನ್ನಯ	:	ಡಾ. ವಾಮನ ನಂದಾವರ
2.	ಅಕ್ಕೆರಸು ಸಿರಿ	:	ಎ. ವಿ. ನಾವಡ
3.	ಕೋಡ್ದಬ್ಬು	:	ಡಾ. ಸುಶೀಲಾ ಉಪಾಧ್ಯಾಯ
4.	ಪರತಿ ಮಂಗನೆ	:	ಕೆ. ಲೀಲಾವತಿ
5.	ಪುಳ್ಕೂರ ಬಾಚೆ	:	ವೆಂಕಟರಾಜ ಪುಣಿಂಚತ್ತಾಯ
6.	ಅಬ್ಬಗೆ ದಾರಗೆ	:	ಕೆ.ಜೆ. ಶೆಟ್ಟಿ ಕಂಡಂದಲೆ
7.	ಮೂಂಕು ಸಂಬಳೊ	:	ಡಾ. ಕೆ. ಚಿನ್ನಪ್ಪ ಗೌಡ
8.	ಮಗೆ ಬರವು ಕಲ್ತೆ	:	ಕನರಾಡಿ ವಾದಿರಾಜ ಭಟ್
9.	ಮಾಯಾಂದಾಳ್	:	ಯಶವಂತಿ ಸುವರ್ಣ
10.	ಕಲ್ಲುರ್ಟಿ ಕಲ್ಕುಡೆ	:	ಅಮೃತ ಸೋಮೇಶ್ವರ
11.	ಬನ್ನಾಲ್	:	ಕ್ಯಾಥರಿನ್ ರಾಡ್ರಿಗಸ್
12.	ಮಾಮಿ ಮರ್ಮಲ್	:	ಡಾ. ಗಣನಾಥ ಶೆಟ್ಟಿ ಎಕ್ಕಾರು
13.	ಜೋಗಿ ಪುರುಸೆರ್	:	ಕುದ್ಕಾಡಿ ವಿಶ್ವನಾಥ ರೈ
14.	ಅಗೋಳಿ ಮಂಜನೆ	:	ಗಣೇಶ ಅಮೀನ್ ಸಂಕಮಾರ್
15.	ಕಣ್ಣ್‌ಡ್ ತೂವಂದಿನ ಕೆಬಿಟ್ ಕೇನಂದಿನ	:	ಕೆ. ಆರ್. ರೈ
16.	ನಾಗಸಿರಿ	:	ಅನಂತರಾಮ ಬಂಗಾಡಿ
17.	ಮಾಯೊದ ಪೊಣ್ಣು	:	ಡಿ. ಯದುಪತಿ ಗೌಡ
18.	ಮುಡಿಪ್ಪೆರಾವಂದಿ ಮಲ್ಲಿಗೆ	:	ಎನ್. ಕೊಯಿರಾ ಬಾಳೆಪುಣಿ
19.	ಅಪ್ಪೊವದಚ್ಚೆ	:	ಮುದ್ದು ಮೂಡುಬೆಳ್ಳೆ
20.	ಭೂತಾಳ ಪಾಂಡ್ಯೆ	:	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್